RNI No. **KARBIL/2001/47147**

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೮ **Volume 148**	ಬೆಂಗಳೂರು, ಗುರುವಾರ, ಫೆಬ್ರವರಿ ೭, ೨೦೧೩ (ಮಾಘ ೧೮, ಶಕ ವರ್ಷ ೧೯೩೪) **Bangalore, Thursday, February 7, 2013 (Magha 18, Shaka Varsha 1934)**	ಸಂಚಿಕೆ ೬ **Issue 6**

ಭಾಗ – ೩

ಸರ್ಕಾರದ ಮತ್ತು ಖಾಸಗಿ ಜಾಹೀರಾತುಗಳು, ಲೋಕಸೇವಾ ಆಯೋಗದ ಜಾಹೀರಾತುಗಳು, ನೇಮಕಾತಿ ಸಮಿತಿಗಳ ಜಾಹೀರಾತುಗಳು

IN THE COURT OF IV ADDITIONAL CITY CIVIL JUDGE AT BANGALORE CITY, MAYOHALL UNIT, CCH.NO.21

G & Wc.No: 25009 OF 2012

Petitioners: 1.**Mrs. P.Padmavathi,** Aged about 33 years, W/o Late.P.Chandra Pratap Reddy,

2. **Baby.P.Sai Thulasi** D/o Late.P.Chandra Pratap Reddy, Aged about 11years

3. **Master.P.Ram charan Reddy** S/o. Late.P.Chandra Pratap Reddy, Aged about 8 years

1 to 3 are residing at No.1-492, Smith Road, S.P.Road Kadapa Town and Mandal Andhra Pradesh.

Petitioner 2&3 being minors represented by the mother is natural guardian, Petitioner No.1.

VS

Respondents: NIL

PUBLIC NOTICE

Notice is hereby given that a petition has been made to this court Under Section 31 of the Guardians and Wards Act, 1890 & under section 8 of Hindu minority and guardianship act – 1956 for the grant of permission to mother Smt.P.Padmavathi to sell the schedule properties mentioned below on behalf of the minor children i.e. petitioner No.2 &3 i.e. Baby. P.Sai Thulasi and master. P. Ramcharan Reddy.

Be it known that no caveat has been entered and the said petition is posted for hearing **on 05-03-2013 at 11"O" clock.** Any person/s claiming to have any interest may come and participate in the proceedings before the grant permission.

SCHEDULE "A" PROPERTY

(Description of the entire property)

ALL THAT PIECE AND PARCEL of the property being converted land bearing Sy. No.66/1, 66/2, 66/3, 66/4, 67, 68/5, 68/6, 68/7 and 70/14B, situated at challaghatta Village, Varthur Hobli, Bangalore, East Taluk, measuring in all 12 Acres and 6 Guntas bounded as follows now within the limits of B.B.M.P:-

East by : Sy. No.63/1, 66/5 and 63/8B

West by : Challaghatta Village

North by: Private Property and Road,

South by: Defence Land

SCHEDULE "B" PROPERTY

APARTMENTS BELONGING TO SRI.P.CHANDRA PRATAP REDDY

a) **Unit No.SN-176, situated on first Floor in Block No.NP bearing Apartment No.NP-204 (Three Bedrooms**), constructed on the property bearing converted Sy.Nos.66/1,66/2,66/3,66/4,67,68/5,68/6,68/7 and 70/14B, situated at Challaghatta Village, Varthur Hobli, Bangalore East Taluk, now within the limits of Bruhat Bangalore Mahanagara Palike, **having super built up area of 134.38 Sq.mtrs (1446 Sq.ft) along with an area of undivided right title and interest measuring 90.52 Sq.Mtrs (974 Sq.ft) and exclusive right in one open car parking space bearing Number No.ONP-204 in the Shriram Spandhana Apartment Complex.**

b) **Unit No.SN-220, situated on the Ground Floor in Block No. NK bearing Apartment No NK-104 (Three Bedrooms),** constructed on the property bearing converted Sy.Nos.66/1,66/2,66/3,66/4,67,68/5,68/6,68/7 and 70/14B, situated at Challaghatta Village, Varthur Hobli, Bangalore East Taluk, now within the limits of Bruhat Bangalore Mahanagara Palike, **having super built up area of 130.39 Sq.mtrs (1403 Sq.ft) along with an area of undivided right title and interest measuring 87.82 Sq.Mtrs (945 Sq.ft) and exclusive right in one open car parking space bearing Number No.ONK-104 in the Shriram Spandhana Apartment Complex.**

c) **Unit No.SN-236, situated on the Ground Floor in Block No. NL bearing Apartment No. NL-104(Three Bedrooms),** constructed on the property bearing converted Sy.Nos.66/1,66/2,66/3,66/4,67,68/5,68/6,68/7 and 70/14B, situated at Challaghatta Village, Varthur Hobli, Bangalore East Taluk, now within the limits of Bruhat Bangalore Mahanagara Palike, **having super built up area of 130.39 Sq.mtrs (1403 Sq.ft) along with an area of undivided right title and interest measuring 87.82 Sq.Mtrs (945 Sq.ft) and exclusive right in one open car parking space bearing Number No.ONL-104 in the Shriram Spandhana Apartment Complex.**

d) **Unit No.SN-232, situated on third Floor in Block No.NK bearing Apartment No.NK-404 (Three Bedrooms),** constructed on the property bearing converted Sy.Nos.66/1,66/2,66/3,66/4,67,68/5,68/6,68/7 and 70/14B, situated at Challaghatta Village, Varthur Hobli, Bangalore East Taluk, now within the limits of Bruhat Bangalore Mahanagara Palike, **having super built up area of 140.70 Sq.mtrs (1514 Sq.ft) along with an area of undivided right title and interest measuring 94.79 Sq.Mtrs (1020 Sq.ft) and exclusive right in one open car parking space bearing Number No.ONK-404 in the Shriram Spandhana Apartment Complex.**

e) **Unit No.SN-224, situated on First Floor in Block No.NK bearing Apartment No.NK-204 (Three Bedrooms),** constructed on the property bearing converted Sy.Nos.66/1,66/2,66/3,66/4,67,68/5,68/6,68/7 and 70/14B, situated at Chalaghatta Village, Varthur Hobli, Bangalore East Taluk, now within the limits of Bruhat Bangalore Mahanagara Palike, **having super built up area of 134.38 Sq.mtrs (1446 Sq.ft) along with an area of undivided right title and interest measuring 90.52 Sq.Mtrs (976 Sq.ft) and exclusive right in one open car parking space bearing Number No.ONK-204 in the Shriram Spandhana Apartment Complex.**

f) **Unit No.SN-172, situated on Ground Floor in Block No.NP bearing Apartment No.NP-104 (Three Bedrooms),** constructed on the property bearing converted Sy.Nos.66/1,66/2,66/3,66/4,67,68/5,68/6,68/7 and 70/14B, situated at Chalaghatta Village, Varthur Hobli, Bangalore East Taluk, now within the limits of Bruhat Bangalore Mahanagara Palike, **having super built up area of 130.39 Sq.mtrs (1403 Sq.ft) along with an area of undivided right title and interest measuring 87.82 Sq.Mtrs (945 Sq.ft) and exclusive right in one open car parking space bearing Number No.ONP-104 in the Shriram Spandhana Apartment Complex.**

By order of the Court

ASSISTANT REGISTRAR,

City Civil Court, Mayohall Unit, Bangalore

P.D. 5

BEFORE THE HON`BLE IV ADDITIONAL CITY CIVIL JUDGE MAYO HALL AT BANGALORE

P & SC No. 25001/2013, HG:06-03-2013.

Petitioners:

1. Smt Pallavi D, aged about 40 years, Daughter of Late R.S.Devakumar, Wife of Mr.S.R.Ravi, Residing at 18/5, 1st Main Road, Vyalikaval, Malleshwaram, Bangalore-560003
2. Sri Ananth D, aged about 42 years, Son of Late R.S,Devakumar, Residing at No.198/22, 5th Main Road, Vyalikaval, Malleshwaram, Bangalore-560003

-**Versus-**

Respondents: NIL

PUBLIC NOTICE

Notice is hereby given that a petition has been made to this Court Under Section 276 of the Indian Succession Act 1925, for grant of Probate of Will dated 05-12-2011 of the deceased Late R.S,Devakumar, who expired on 01-03-2012 at Bangalore.

Be it known that no Caveat has been entered and the said petition is posted for hearing on **06-03-2013 at 11`O clock.** Any person/s claiming to have any interest may come and participate in the proceedings before the grant of Probate.

SCHEDULE

Immovable Property

1) Property bearing No.39, 40, 41, 42, 43, 44 and 90, Subedar Chatram Road, Division No.12, Bangalore-560009, together with the building. Bounded by East: Subedar Chatram Road, West: Land belonging to one Sri H Ramaiah, North: Land belonging to Mekkala Mallaiah Choultry, South: Partly by Masti Veeranna property and H Ramaiah`s Property.

2) Property bearing No.2, comprised of old Survey No. 22/1 (Ground Floor) and 221/1/ (First Floor), No.22/1-A, situate on the Race Course Loop Lane (previously Sheshadri Road) Ward No.27, Gandhinagar, Bangalore – 560009. Bounded by East: Racecourse Loop Lane Road, West: Properties of Sri R.S.Umesh, North: Properties of Sri R S Umesh, South: Properties of Smt.Subamma

3) Property bearing No.198/22 (New No.43, 5th Main Road, Vyalikaval, Malleshwaram, Bangalore-560003. Bounded by East: 5th Main Road, Vyalikaval West: Site No.203, North: Site No.191, South: Site No.199.

4) Property bearing No. 29/3 (New No.29/5) NH-4, Tuancheguppe Village, Kasaba Hobli, Nelamangala Taluk, Bangalore Rural District. Bounded East: Gedalahalli, West: Remaining Portion of Sy.No.29/3, North: National High way No.4, South: Property of Smt. Khursheeda Begum.

Movable Property

A Maruthi Suzuki Zen, Car bearing registration number KA 02 P 4002

Given under my hand and seal of the Court, this 19th day of January 2013.

By order of the Court

ASSISTANT REGISTRAR,

P.D. 6 City Civil Court, Mayo hall Unit, Bangalore.

KARNATAKA PUBLIC SERVICE COMMISSION

No. E (2)851/2012-2013/PSC, Dated: 22/23-11-2012.

Sub: Additional Select List of candidates for recruitment of Sub Inspector of Excise in the Department of Exercise

Ref: 1. Notification No. E (3) 831/2009-10/PSC, dated: 04-08-2009

2. Notification No. E (2) 790/2010-11/PSC, dated: 28-12-2010

3. Notification No. E (2) 868/2010-11/PSC, dated: 17-03-2011

4. Notification No. E (2) 4981/2011-12/PSC, dated: 01-10-2011

In pursuance of this Office Notification dated: 04-08-2009, the provisional Select List of Candidates for appointment to 101 posts of Sub-Inspector of Excise was published on 28-12-2010 and Final Select Lists on 17-03-2011 and 01-10-2011, In accordance with G.O. No. DPAR/26/Sehima/2002, date: 11-04-2003, now based on the relevant rules in force in this regard the additional select list of 11 candidates is hereby published for information of the candidates.

Appointing Authority : Excise Commissioner

Name of the Department : Excise

SL.NO.	NAME OF THE CANDIDATE	REG. N0.	D O B	RESERVATION	MARKS
1	RAGHU K.C 1ST CROSS, BASAVESHWARA NAGARA, BWSSB WEST, KANAKAPURA TOWN, RAMANAGARA DIST RAMANAGARA-562117	307403	18-07-85	GM	143.50
2	SHARATH KUMAR D.P SHARATH KUMAR D.P S/O PRAKASHA REDDY G.Y BHARAMASAMUDRA (P) JAGALUR (T) DAVANAGERE D-577528	302911	10-07-83	3A	143.00

SL.NO.	NAME OF THE CANDIDATE	REG. N0.	D O B	RESERVATION	MARKS
3	MANJUNATHA H. S MANJUNATHA H.S ASST. TEACHER GLPS NEEKANAHALLI DEVALADAKERE POST HANBAL HOBLI SAKLESHPUR TALUK HASSAN-577119	500336	01-06-82	GM/3A/RL	142.00
4	MANJUNATHA .G #80/5, FIRST FLORE, 4TH MAIN, GANGAPPA BLOCK, GANGANAGARA, BANGALORE-560032	305857	06-11-84	GM/3A/KMS	142.00
5	NAGALINGASWAMY K. BASAVANAPURA KELLAMBALLI POST, CHAMARAJANAGAR TQ, CHAMARAJANAGAR DISTRICT-571313	500096	10-01-82	3B/RL	140.50
6	RAJU SHIGIHALLI, RAJU. SOMAPPA SHIGIHALLI, AT : POST : BHENDIGERI, TAL : DIST : BELGAUM, BELGAUM-591109	101093	08-01-83	3B/KMS	138.50
7	KRISHNA MURTHY.R #42, 2ND CROSS, VERSOVA LAYOUT, C.V.RAMAN NAGAR, BANGALORE-560093	308867	01-06-86	SC/RL	133.50
8	THIRTHA. A D/O JAYAMMA, THAYINERALU, BND. VENKATESHWAR TEMPLE, BANASHANKARI 2ND STAGE, TUMKUR-572102	302834	01-07-83	GM/3A/W	118.50
9	DEEPAK V R NO. 500, 11TH CROSS, 4-MAIN ROAD, 3RD BLOCK, BEL LAYOUT VIDYARANYAPURA, BANGALORE-560097	300007	27-04-72	GM/XMP	112.00
10	SUVARNA KOTI NEAR BASAVESWAR CIRCLE, KEREVANDI NARAGUNDA, GADAG DIST, GADAG-582207	300934	01-06-82	2A/W	108.00
11	BALAGOUDA PATIL BALAGOUDA .Y. PATIL, AT : YADDALAGUDDA, POST : ANKALGI, TALUK : GOKAK, DIST : BELGAUM, BELGAUM-591101	100018	20-08-73	ST/XMP	61.00

Note: The selection list is subject to the final result in Application No. 7225/10 and 7701/11 pending before Hon`ble KAT

K.R.SUNDAR, I.A.S,
Secretary,
Karnataka Public Service Commission,
Bangalore-560001.

P.R. 13

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು–2

ಅಧಿಸೂಚನೆ

ಸಂಖ್ಯೆ: ಕಸನಿ:74:ಸಿಬ್ಬಂದಿ1:2008–09, ದಿನಾಂಕ: 19.01.2013

ವಿಷಯ: ಕಾರವಾರ ಜಿಲ್ಲಾ ರಂಗಮಂದಿರದ ಹಿರಿಯ ಎಲೆಕ್ಟ್ರೀಷಿಯನ್ ಕಂ ಸೌಂಡ್ ಸೂಪರ್‌ವೈಜರ್, ಬ್ಯಾಕ್‌ಲಾಗ್ ಹುದ್ದೆಯನ್ನು ತುಂಬುವ ಕುರಿತು.

ಈ ಇಲಾಖೆಯ ಉ.ಕ.ಜಿಲ್ಲೆ, ಕಾರವಾರ ಇಲ್ಲಿ ಖಾಲಿ ಇರುವ ಹಿರಿಯ ಎಲೆಕ್ಟ್ರೀಷಿಯನ್ ಕಂ ಸೌಂಡ್ ಸೂಪರ್ ವೈಜರ್ ಒಂದು ಹುದ್ದೆಯನ್ನು ಪರಿಶಿಷ್ಟ ಪಂಗಡದ ಬ್ಯಾಕ್‌ಲಾಗ್‌ಯಡಿ ಸರ್ಕಾರದ ಅಧಿಸೂಚನೆ ಸಂಖ್ಯೆ **ಡಿಪಿಎಆರ್ 13 ಎಸ್.ಬಿಸಿ 2001, ದಿನಾಂಕ:21.11.2001 ಮತ್ತು 01.06.2002** ರ ಅನ್ವಯ ಭರ್ತಿ ಮಾಡಲು ನಿಗದಿತ ನಮೂನೆಯಲ್ಲಿ ಅರ್ಜಿಗಳನ್ನು ಅರ್ಹ ಅಭ್ಯರ್ಥಿಗಳಿಂದ ಆಹ್ವಾನಿಸಲಾಗಿದೆ. ಅಭ್ಯರ್ಥಿಗಳು ಈ ಅಧಿಸೂಚನೆಯೊಡನೆ ಪ್ರಕಟಿಸಿರುವ ನಿಗದಿತ ಅರ್ಜಿ ನಮೂನೆಯಲ್ಲಿ ಭರ್ತಿ ಮಾಡಿದ ಅರ್ಜಿಗಳನ್ನು ದಿನಾಂಕ: 19.02.2013 ಸಂಜೆ 5 ಗಂಟೆಯೊಳಗೆ ಆಯುಕ್ತರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು–2 ಇಲ್ಲಿಗೆ ತಲುಪಿಸತಕ್ಕದ್ದು.

1. ಖಾಲಿ ಹುದ್ದೆಗಳ ಸಂಖ್ಯೆ : 01 (ಒಂದು)
2. ಹಿರಿಯ ಎಲೆಕ್ಟ್ರೀಷಿಯನ್ ಕಂ ಸೌಂಡ್ ಸೂಪರ್‌ವೈಸರ್ ಹುದ್ದೆಯ ಮೀಸಲಾತಿ ವರ್ಗೀಕರಣ : ಪರಿಶಿಷ್ಟ ಪಂಗಡ – ಮಹಿಳಾ ಅಭ್ಯರ್ಥಿ
3. ವಯೋಮಿತಿ ವಿದ್ಯಾರ್ಹತೆ ಮತ್ತು ವೇತನ ಶ್ರೇಣಿ
   - **ವಯೋಮಿತಿ:** ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಅಂದರೆ ದಿನಾಂಕ19.02.2013 ಕ್ಕೆ ಅಭ್ಯರ್ಥಿಗೆ ಕನಿಷ್ಠ 18 ವರ್ಷ ವಯಸ್ಸಾಗಿರಬೇಕು ಮತ್ತು ಗರಿಷ್ಠ 40 ವರ್ಷ ಮೀರಿರಬಾರದು
   - **ವಿದ್ಯಾರ್ಹತೆ:** ಕನ್ನಡವನ್ನು ಒಂದು ವಿಷಯವನ್ನಾಗಿ ತೆಗೆದುಕೊಂಡು ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ಪರೀಕ್ಷೆ ತೇರ್ಗಡೆಯಾಗಿರಬೇಕು ಇದರೊಂದಿಗೆ ಟೆಲಿಕಮ್ಯೂನಿಕೇಷನ್ (ಸೌಂಡ್ ಹಾಗೂ ಟಿ.ವಿ) ನಲ್ಲಿ ಡಿಪ್ಲೋಮೋ
   - **ವೇತನ ಶ್ರೇಣಿ:** ರೂ. 17,650–32000

4. **ಆಯ್ಕೆ ವಿಧಾನ** : ಅಭ್ಯರ್ಥಿಗಳಿಂದ ಅರ್ಜಿಗಳಲ್ಲಿ ಹುದ್ದೆಗೆ ನಿಗದಿಪಡಿಸಿರುವ ಪರೀಕ್ಷೆಯಲ್ಲಿ ಗಳಿಸಿರುವ ಅಂಕಗಳ ಆಧಾರದ ಮೇಲೆ ಅರ್ಹತಾ ಪಟ್ಟಿಯನ್ನು ತಯಾರಿಸಲಾಗುವುದು. ಅರ್ಹತಾ ಪಟ್ಟಿಯನ್ನು ತಯಾರಿಸುವಾಗ ಸರ್ಕಾರದ ಅಧಿಸೂಚನೆ ಸಂಖ್ಯೆ **ಡಿಪಿಎಆರ್ 13 ಎಸ್‌ಬಿಸಿ 2001 ದಿನಾಂಕ:21.11.2001** ರನ್ವಯ ಕನಿಷ್ಠ 18 ವಯಸ್ಸಾಗಿರುವ ಹಾಗೂ ಗರಿಷ್ಠ 40 ವರ್ಷ ಮೀರಿರದ ಅಭ್ಯರ್ಥಿಗಳಿಗೆ ಪ್ರಥಮ ಆದ್ಯತೆ ನೀಡಲಾಗುವುದು. 18 ವರ್ಷದಿಂದ 40 ವರ್ಷಗೊಳಗಿನ ಅರ್ಹ ಅಭ್ಯರ್ಥಿಯು ದೊರಕದಿದ್ದಲ್ಲಿ, 18 ವರ್ಷದಿಂದ 40 ವರ್ಷ ವಯಸ್ಸಿನೊಳಗಿನ ಅಭ್ಯರ್ಥಿಗಳನ್ನು ಆಯ್ಕೆಗೆ ಪರಿಗಣಿಸಲಾಗುವುದು.

5. **ಲಗತ್ತುಗಳು:**

1. ಅರ್ಹತಾ (ಡಿಪ್ಲೋಮ) ಪರೀಕ್ಷೆಯ ಅಂಕಪಟ್ಟಿಯ ನಕಲು ಲಗತ್ತಿಸಿರಬೇಕು.
2. ಜನ್ಮ ದಿನಾಂಕದ ಪ್ರಮಾಣ ಪತ್ರ/ ಎಸ್.ಎಸ್.ಎಲ್.ಸಿ ಅಂಕಪಟ್ಟಿ/ ವರ್ಗಾವಣೆ ಪ್ರಮಾಣ ಪತ್ರದ ನಕಲು ಲಗತ್ತಿಸಬೇಕು.
3. ಪರಿಶಿಷ್ಟ ಪಂಗಡಕ್ಕೆ ಸಂಬಂಧಪಟ್ಟಂತೆ ತಹಶೀಲ್ದಾರ್‌ರವರಿಂದ ಪಡೆದ (ನಿಗದಿತ ನಮೂನೆಯಲ್ಲಿ) ಜಾತಿ ಪ್ರಮಾಣ ಪತ್ರದ ದೃಢೀಕೃತ ನಕಲು ಸಲ್ಲಿಸುವುದು.
4. ಅರ್ಜಿಯಲ್ಲಿ ಫೋಟೋ ಅಂಟಿಸಲು ನಿಗದಿಪಡಿಸಿರುವ ಸ್ಥಳದಲ್ಲಿ ನಿಮ್ಮ ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರವನ್ನು ಅಂಟಿಸಿ ಅದರ ಮೇಲೆ ಪೂರ್ಣ ಸಹಿ ಮಾಡುವುದು

- ಈ ಮೇಲೆ ಹೇಳಿದ ಎಲ್ಲಾ ದಾಖಲೆಗಳ ದೃಢೀಕೃತ ಪ್ರತಿ ನೀಡಬೇಕು.

ಸೂಚನೆಗಳು:

1. ಅರ್ಜಿಯಲ್ಲಿ ಭರ್ತಿ ಮಾಡಿರುವ ಮಾಹಿತಿ ಮತ್ತು ಅದರೊಂದಿಗೆ ಲಗತ್ತಿಸಿರುವ ಪ್ರಮಾಣ ಪತ್ರಗಳು ಸುಳ್ಳು ಮಾಹಿತಿ ನೀಡಿದ್ದಾಗಿ ನೇಮಕಾತಿಯ ಯಾವುದೇ ಹಂತದಲ್ಲಿ ಕಂಡು ಬಂದಲ್ಲಿ ಅಂತಹ ಅರ್ಜಿಗಳನ್ನು ಪತ್ರ ವ್ಯವಹಾರವಿಲ್ಲದೇ ತಿರಸ್ಕರಿಸಲಾಗುವುದು ಮತ್ತು ಅಂತಹ ಅಭ್ಯರ್ಥಿಗಳ ವಿರುದ್ಧ ಕಾನೂನು ರೀತ್ಯಾ ಕ್ರಮಕೈಗೊಳ್ಳಲು ಉಪಕ್ರಮಿಸಲಾಗುವುದು.
2. ಅಭ್ಯರ್ಥಿಯು ಯಾವುದೇ ಅಪರಾಧ ಮೊಕದ್ದಮೆಯಲ್ಲಿ ಬಂಧನಕ್ಕೆ ಒಳಪಟ್ಟಿರಬಾರದು. ಅಲ್ಲದೆ ಅಪರಾಧ ಮೊಕದ್ದಮೆಯ ತನಿಖೆಗೆ ಒಳಗಾಗಿರಬಾರದು. ಅಪರಾಧ ಪ್ರಕರಣಗಳಲ್ಲಿ ದೋಷಿಯಾಗಿರಬಾರದು. ಒಂದು ವೇಳೆ ಇಂತಹ ಪ್ರಕರಣಗಳಿಗೆ ಒಳಗಾಗಿದ್ದಲ್ಲಿ ಅಂತಹ ಅಭ್ಯರ್ಥಿಯು ನೇಮಕಾತಿಗೆ ಅನರ್ಹರಾಗುತ್ತಾರೆ.

3. ಅಪೂರ್ಣ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

4. ಸುಳ್ಳು ಮಾಹಿತಿ ಅಥವಾ ನಕಲಿ ಪ್ರಮಾಣ ಪತ್ರ/ದಾಖಲಾತಿಗಳನ್ನು ಸಲ್ಲಿಸಿ ನೌಕರಿ ಪಡೆದಿರುವುದು ಯಾವುದೇ ಸಂಧರ್ಭದಲ್ಲಿ ಕಂಡು ಬಂದಲ್ಲಿ ಯಾವುದೇ ಮುನ್ಸೂಚನೆ ನೀಡದೇ ನೌಕರಿಯಿಂದ ವಜಾ ಮಾಡುವುದರ ಜೊತೆಗೆ ಅವರ ವಿರುದ್ಧ ಕಾನೂನು ರೀತ್ಯಾ ಕ್ರಮ ತೆಗೆದುಕೊಳ್ಳಲಾಗುವುದು.

5. ಈ ಅಧಿಸೂಚನೆಯೊಂದಿಗೆ ಪ್ರಕಟಿಸಿರುವ ಅರ್ಜಿ ನಮೂನೆಯಂತೆ ಅರ್ಜಿಯನ್ನು ಸಿದ್ಧಪಡಿಸಿ ಸಲ್ಲಿಸಬೇಕಾಗಿರುತ್ತದೆ. ಕಚೇರಿ ವತಿಯಿಂದ ಅರ್ಜಿ ನಮೂನೆಗಳನ್ನು ನೀಡಲಾಗುವುದಿಲ್ಲ

6. ಅಭ್ಯರ್ಥಿಗಳು ಭರ್ತಿ ಮಾಡಿದ ಅರ್ಜಿಗಳನ್ನು ನೊಂದಾಯಿತ ಅಂಚೆ/ ಕೋರಿಯರ್ ಮುಖಾಂತರ ಅಥವಾ ಸ್ವತ: ಆಯುಕ್ತರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ರವರ ಕಚೇರಿಗೆ ನಿಗದಿತ ದಿನಾಂಕ ಮತ್ತು ಸಮಯದೊಳಗೆ ತಲುಪಿಸಬೇಕು. ತಡವಾಗಿ ಬಂದ ಅರ್ಜಿಯನ್ನು ಸ್ವೀಕರಿಸಲಾಗುವುದಿಲ್ಲ. ಭರ್ತಿ ಮಾಡಿದ ಅರ್ಜಿಯನ್ನು ಸಲ್ಲಿಸುವ ಲಕೋಟೆಯ ಮೇಲೆ **ಹಿರಿಯ ಎಲೆಕ್ಟ್ರೀಷಿಯನ್ ಕಂ ಸೌಂಡ್ ಸೂಪರ್‌ವೈಸರ್ ಬ್ಯಾಕ್‌ಲಾಗ್ ಹುದ್ದೆಗೆ ಅರ್ಜಿ** ಎಂದು ಸ್ಪಷ್ಟವಾಗಿ ನಮೂದಿಸಬೇಕು, ಅರ್ಜಿ ಸ್ವೀಕರಿಸಿದ್ದಕ್ಕೆ ಸಂಬಂಧಪಟ್ಟವರಿಂದ ದಿನಾಂಕ ಮತ್ತು ಸಹಿ ಪಡೆದುಕೊಳ್ಳಬಹುದಾಗಿದೆ.

7. ಸಲ್ಲಿಸಲಾಗುವ ಯಾವುದೇ ದಾಖಲೆಗಳನ್ನು ಹಿಂದಿರುಗಿಸಲಾಗುವುದಿಲ್ಲ. ಈ ಕುರಿತು ಯಾವುದೇ ಪತ್ರ ವ್ಯವಹಾರಕ್ಕೆ ಅವಕಾಶ ಇರುವುದಿಲ್ಲ.

ಆಯುಕ್ತರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಿರಿಯ ಎಲೆಕ್ಟ್ರೀಷಿಯನ್ ಕಂ ಸೌಂಡ್ ಸೂಪರ್‌ವೈಸರ್ ಹುದ್ದೆಗೆ ಅರ್ಜಿ

ಅರ್ಜಿ ಸಂಖ್ಯೆ:

ನಿಮ್ಮ ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರವನ್ನು ಅಂಟಿಸಿ ಅದರ ಮೇಲೆ ಸಹಿ ಮಾಡುವುದು

ಗೆ:

ಆಯುಕ್ತರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು-560 002

1) ಅಭ್ಯರ್ಥಿಯ ಹೆಸರು :

2) ತಂದೆಯ ಹೆಸರು :

3) ಅಬ್ಯರ್ಥಿಯ ಅಂಚೆ ವಿಳಾಸ :

4) ವಿದ್ಯಾರ್ಹತೆ :

ಕ್ರ.ಸಂ.	ಡಿಪ್ಲೊಮಾ (ಟೆಲಿಕಮ್ಯೂನಿಕೇಷನ್)ಸೌಂಡ್ ಹಾಗೂ ಟಿ.ವಿ	ಗರಿಷ್ಠ ಅಂಕಗಳು	ಗಳಿಸಿದ ಅಂಕಗಳು	ಶೇಕಡಾವಾರು

5) ಹುಟ್ಟಿದ ದಿನಾಂಕ :

6) ಲಗತ್ತುಗಳು

1. ಎಸ್.ಎಸ್.ಎಲ್.ಸಿ ಅಂಕಪಟ್ಟಿಯ ದೃಢೀಕೃತ ಪ್ರತಿ
2. ಜಾತಿ ಪ್ರಮಾಣ ಪತ್ರದ ದೃಢೀಕೃತ ಪ್ರತಿ
3. ಅರ್ಹತಾ (Qualifying) ಪರೀಕ್ಷೆಯ ಅಂದರೆ ಡಿಪ್ಲೋಮೋ ಅಂಕಪಟ್ಟಿಯ ದೃಢೀಕೃತ ನಕಲುಗಳು

ಸೂಚನೆ: ಅಧಿಸೂಚನೆಯಲ್ಲಿ ಸೂಚಿಸಿರುವ ಎಲ್ಲಾ ಸೂಚನೆಗಳಂತೆ ಅರ್ಜಿ ಸಲ್ಲಿಸದಿದ್ದಲ್ಲಿ ಅರ್ಜಿಯನ್ನು ತಿರಸ್ಕರಿಸಲಾಗುವುದು

ಘೋಷಣೆ

ಮೇಲೆ ಹೇಳಿದ ವಿವರಗಳು ನನಗೆ ತಿಳಿದ ಮಟ್ಟಿಗೆ ಮತ್ತು ನಾನು ನಂಬುವಷ್ಟರ ಮಟ್ಟಿಗೆ ನಿಜವೆಂದು ಈ ಮೂಲಕ ಘೋಷಿಸುತ್ತೇನೆ. ಯಾವುದೇ ಮಾಹಿತಿಯ, ನೇಮಕಾತಿ ಮುಂಚೆ ಅಥವಾ ತರುವಾಯ ಸುಳ್ಳು ಅಥವಾ ತಪ್ಪೆಂದು ಕಂಡು ಬಂದ ಸಂಧರ್ಭದಲ್ಲಿ ಅಥವಾ ಅನರ್ಹತೆ ಪತ್ತೆ ಆದ ಸಂದರ್ಭದಲ್ಲಿ ನೇಮಕಾತಿ ಸಮಿತಿಯು ನನ್ನ ವಿರುದ್ಧ ಕ್ರಮ ಕೈಗೊಳ್ಳಬಹುದಾಗಿದೆ ಎಂದು ನನಗೆ ತಿಳಿದಿರುತ್ತದೆ.

ನಾನು ಅಧಿಸೂಚನೆಯ ನಿಯಮಗಳನ್ನು ಜಾಗರೂಕತೆಯಿಂದ ಓದಿರುತ್ತೇನೆ. ಮತ್ತು ಅವುಗಳಿಗೆ ಬದ್ಧನಾಗಿರುತ್ತೇನೆ. ನಾನು ಅರ್ಜಿ ಸಲ್ಲಿಸಿದ ಹುದ್ದೆಯ ನೇಮಕಾತಿಗೆ ನಿಗದಿಪಡಿಸಿದ ವಯೋಮಿತಿ ವಿದ್ಯಾರ್ಹತೆ ಮುಂತಾದ ಅರ್ಹತೆಯ ಎಲ್ಲ ಷರತ್ತುಗಳನ್ನು ಪೂರೈಸುವುದಾಗಿಯೂ ಮತ್ತು ಇದೇ ಬಗೆಯ ಯಾವುದೇ ಪರೀಕ್ಷೆಗೆ ಹಾಜರಾಗದಂತೆ ನಾನು ಪರೀಕ್ಷೆಯಿಂದ ಉಚ್ಚಾಟಿಸಲ್ಪಟ್ಟಿಲ್ಲವೆಂದು ಸಹ ಘೋಷಿಸುತ್ತೇನೆ.

ಸ್ಥಳ:
ದಿನಾಂಕ:

ಅಭ್ಯರ್ಥಿಯ ಪೂರ್ಣ ಸಹಿ
ಪರಿಶೀಲಿಸಿದ ಅಧಿಕಾರಿಯ ಸಹಿ ಮತ್ತು ಹೆಸರು

PR.10

ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನಡಾವಳಿಗಳು ಉತ್ತರ ಕನ್ನಡ, ಕಾರವಾರ

ಅಧಿಸೂಚನೆ ಸಂಖ್ಯೆ: 2/2013 ದಿನಾಂಕಃ 24 ನೇ ಜನವರಿ ಮಾಹೆ 2013

ನೇಮಕಾತಿ ಪ್ರಕಟಣೆ

ಕಾರವಾರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ಘಟಕದಲ್ಲಿ ಖಾಲಿ ಇರುವ ಈ ಕೆಳಕಂಡ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಕೆಳಕಂಡ ಷರತ್ತುಗಳನ್ನು ಪೂರೈಸಿದ ಅರ್ಹ ಅಭ್ಯರ್ಥಿಗಳು ದಿನಾಂಕಃ 25 ನೇ ಫೆಬ್ರವರಿ 2013 ಸಂಜೆ 5–00 ಗಂಟೆಯೊಳಗೆ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ.

1. ಖಾಲಿ ಇರುವ ಹುದ್ದೆಯ ವಿವರಗಳುಃ

ಕ್ರಮ ಸಂ.	ಹುದ್ದೆಯ ಹೆಸರು	ಖಾಲಿ ಇರುವ ಹುದ್ದೆಗಳ ಸಂಖ್ಯೆ	ವೇತನಶ್ರೇಣಿ
1	ಶೀಘ್ರಲಿಪಿಗಾರರು	7	14550–350–15600–400–17200–450–19000–500–21000–600–24600–700 26700
2	ಬೆರಳಚ್ಚುಗಾರರು	16	11600–200–12000–250–13000–300–14200–350–15600–400–17200–450–19000–500–21000
3	ನಕಲು ಬೆರಳಚ್ಚುಗಾರರು	2	11600–200–12000–250–13000–300–14200–350–15600–400–17200–450–19000–500–21000
4	ಪ್ರೊಸಸ್ ಸರ್ವರ್ಸ್	11	10400–200–12000–250–13000–300–14200–350–15600–400–16000
5	ಜವಾನರು	10	9600–200–12000–250–13000–300–14200–350–14550

ಖಾಲಿ ಹುದ್ದೆಗಳ ವರ್ಗೀಕರಣಃ

ಸರ್ಕಾರಿ ಆದೇಶ ಸಂಖ್ಯೆ ಡಿಪಿಎಆರ್ 8 ಸಹಿಮ 95 ದಿನಾಂಕಃ 20–6–95 ಮತ್ತು ಸರ್ಕಾರಿ ಆದೇಶ ಸಂಖ್ಯೆ ಸಿಆಸುಇ 53 ಸೇನನಿ 2002, ದಿನಾಂಕಃ 4–1–2008 ಮತ್ತು ಸರ್ಕಾರಿ ಆದೇಶ ಸಂಖ್ಯೆ ಸಿಆಸುಇ 128 ಸೇನನಿ 2006 ದಿನಾಂಕಃ 01–08–2009 ರ ಪ್ರಕಾರ ಕಾಯ್ದಿರಿಸಿದ ಹುದ್ದೆಗಳ ವರ್ಗೀಕರಣ.

ಶೀಘ್ರಲಿಪಿಗಾರರ ಹುದ್ದೆಗಳು - 7

	ಸಾಮಾನ್ಯ ಅರ್ಹತೆ	ಪರಿಶಿಷ್ಟ ಜಾತಿ	ಪ್ರವರ್ಗ – II ಎ	ಪ್ರವರ್ಗ – III ಎ	ಪ್ರವರ್ಗ – III ಬಿ	ಒಟ್ಟು
ಇತರೆ ಅಭ್ಯರ್ಥಿ	–	–	–	1	1	**2**
ಮಹಿಳಾ ಅಭ್ಯರ್ಥಿ	1	–	–	–	–	**1**
ಗ್ರಾಮೀಣ ಅಭ್ಯರ್ಥಿ	1	1	1	–	–	**3**
ಮಾಜಿ ಸೈನಿಕ ಅಭ್ಯರ್ಥಿ	1	–	–	–	–	**1**
ಒಟ್ಟು	**3**	**1**	**1**	**1**	**1**	**7**

ಬೆರಳಚ್ಚುಗಾರರ ಹುದ್ದೆಗಳು - 16

	ಸಾಮಾನ್ಯ ಅರ್ಹತೆ	ಪರಿಶಿಷ್ಟ ಜಾತಿ	ಪರಿಶಿಷ್ಟ ಪಂಗಡ	ಪ್ರವರ್ಗ – I	ಪ್ರವರ್ಗ –II ಎ	ಪ್ರವರ್ಗ–II ಬಿ	ಪ್ರವರ್ಗ–III ಬಿ	ಒಟ್ಟು
ಇತರೆ ಅಭ್ಯರ್ಥಿ	2	1	–	–	–	–	–	**3**
ಮಹಿಳಾ ಅಭ್ಯರ್ಥಿ	2	–	1	1	1	1	1	**7**
ಗ್ರಾಮೀಣ ಅಭ್ಯರ್ಥಿ	1	1	–	–	1	–	–	**3**
ಅಂಗವಿಕಲ ಅಭ್ಯರ್ಥಿ	–	1	–	–	–	–	–	**1**
ಮಾಜಿ ಸೈನಿಕ ಅಭ್ಯರ್ಥಿ	1	–	–	–	–	–	–	**1**
ಯೋಜನಾ ನಿರಾಶ್ರಿತ ಅಭ್ಯರ್ಥಿ	1	–	–	–	–	–	–	**1**
ಒಟ್ಟೂ	**7**	**3**	**1**	**1**	**2**	**1**	**1**	**16**

ಬೆರಳಚ್ಚು ನಕಲುಗಾರರ ಹುದ್ದೆ - 2

	ಸಾಮಾನ್ಯ ಅರ್ಹತೆ	ಪ್ರವರ್ಗ – II ಎ	ಒಟ್ಟು
ಮಹಿಳಾ ಅಭ್ಯರ್ಥಿ	1	1	2

ಪ್ರೊಸೆಸ್ ಸರ್ವರ್ - 11

	ಸಾಮಾನ್ಯ ಅರ್ಹತೆ	ಪರಿಶಿಷ್ಟ ಜಾತಿ	ಪರಿಶಿಷ್ಟ ಪಂಗಡ	ಪ್ರವರ್ಗ – II ಎ	ಪ್ರವರ್ಗ–III ಎ	ಪ್ರವರ್ಗ–III ಬಿ	ಒಟ್ಟು
ಇತರೆ ಅಭ್ಯರ್ಥಿ	2	1	–	1	–	–	4
ಮಹಿಳಾ ಅಭ್ಯರ್ಥಿ	1	–	1	–	1	1	4
ಗ್ರಾಮೀಣ ಅಭ್ಯರ್ಥಿ	1	–	–	–	–	–	1
ಅಂಗವಿಕಲ ಅಭ್ಯರ್ಥಿ	1	–	–	–	–	–	1
ಮಾಜಿ ಸೈನಿಕ ಅಭ್ಯರ್ಥಿ	1	–	–	–	–	–	1
ಒಟ್ಟೂ	6	1	1	1	1	1	11

ಜವಾನರು– 10

	ಸಾಮಾನ್ಯ ಅರ್ಹತೆ	ಪರಿಶಿಷ್ಟ ಜಾತಿ	ಪ್ರವರ್ಗ – II ಎ	ಪ್ರವರ್ಗ – II ಬಿ	ಪ್ರವರ್ಗ–III ಎ	ಒಟ್ಟು
ಇತರೆ ಅಭ್ಯರ್ಥಿ	1	–	–	1	–	2
ಮಹಿಳಾ ಅಭ್ಯರ್ಥಿ	1	1	1	–	–	3
ಗ್ರಾಮೀಣ ಅಭ್ಯರ್ಥಿ	1	1	–	–	–	2
ಅಂಗವಿಕಲ ಅಭ್ಯರ್ಥಿ	1	–	–	1	1	3
ಒಟ್ಟೂ	4	2	1	2	1	10

1	ಅರ್ಜಿಗಳನ್ನು ರಜಿಸ್ಟರ್ಡ ಅಂಚೆ ಮೂಲಕ ಕಳುಹಿಸಬೇಕಾದ ವಿಳಾಸ	**ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಉತ್ತರ ಕನ್ನಡ, ಕಾರವಾರ**
2	ಅರ್ಜಿಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ	ದಿನಾಂಕಃ 25.02.2013 ರಂದು ಸಂಜೆ 5–00 ಗಂಟೆ
3	ವಿದ್ಯಾರ್ಹತೆ	
	ಅ) ಶೀಘ್ರಲಿಪಿಗಾರರ ಹುದ್ದೆಗೆ	1. ಎಸ್.ಎಸ್.ಎಲ್.ಸಿ./ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣವಾಗಿರಬೇಕು. 2. ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ಹಿರಿಯ ದರ್ಜೆಯ ಶೀಘ್ರಲಿಪಿ ಹಾಗೂ ಹಿರಿಯ ದರ್ಜೆಯ ಬೆರಳಚ್ಚು ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು ಅಥವಾ ತತ್ಸಮಾನ ವಿದ್ಯಾರ್ಹತೆ.
	ಆ) ಬೆರಳಚ್ಚುಗಾರರ ಹುದ್ದೆಗೆ	1. ಎಸ್.ಎಸ್.ಎಲ್.ಸಿ./ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣವಾಗಿರಬೇಕು. 2. ಕನ್ನಡ ಮತ್ತು ಆಂಗ್ಲ ಭಾಷೆಯ ಹಿರಿಯ ದರ್ಜೆಯ ಬೆರಳಚ್ಚು ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು ಅಥವಾ ತತ್ಸಮಾನ ವಿದ್ಯಾರ್ಹತೆ
	ಇ) ಬೆರಳಚ್ಚು ನಕಲುಗಾರರ ಹುದ್ದೆಗೆ	1. ಎಸ್.ಎಸ್.ಎಲ್.ಸಿ./ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣವಾಗಿರಬೇಕು. 2. ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ಕಿರಿಯ ಬೆರಳಚ್ಚು ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು ಅಥವಾ ತತ್ಸಮಾನ ವಿದ್ಯಾರ್ಹತೆ.
	ಈ) ಪ್ರೋಸಸ್ ಸರ್ವರ್ ಹುದ್ದೆಗೆ	1. ಎಸ್.ಎಸ್.ಎಲ್.ಸಿ./ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣವಾಗಿರಬೇಕು 2 ವಾಹನ ಚಾಲನೆಯ ಪರವಾನಗಿ ಹೊಂದಿದವರಿಗೆ ಆದ್ಯತೆ.
	ಉ) ಜವಾನ ಹುದ್ದೆಗೆ	1. ಏಳನೇ ತರಗತಿಯಲ್ಲಿ ಉರ್ತೀರ್ಣರಾಗಿರಬೇಕು ಹಾಗೂ ಕನ್ನಡ ಒಂದು ವಿಷಯವಾಗಿ ಓದಲು ಮತ್ತು ಬರೆಯಲು ಬರಬೇಕು.
4	ವಯೋಮಿತಿ (ಎಲ್ಲಾ ಹುದ್ದೆಗಳಿಗೆ)	ಅಭ್ಯರ್ಥಿಯು 18 ವರ್ಷ ಪೂರೈಸಿರಬೇಕು ಮತ್ತು ಗರಿಷ್ಠ ವಯಸ್ಸು ಕೆಳಗಿನಂತಿರಬೇಕು. 1. ಅನುಸೂಚಿತ ಜಾತಿ ಮತ್ತು ಪಂಗಡ ಹಾಗೂ ಪ್ರವರ್ಗ– I– ರ ಅಭ್ಯರ್ಥಿಗಳಿಗೆ 40 ವರ್ಷ ಮೀರಿರಬಾರದು. 2. ಗುಂಪು II–ಎ, II–ಬಿ , III–ಎ ಹಾಗೂ III–ಬಿ ಅಭ್ಯರ್ಥಿಗಳಿಗೆ 38 ವರ್ಷ ಮೀರಿರಬಾರದು. 3. ಸಾಮಾನ್ಯ ಅಭ್ಯರ್ಥಿಗಳಿಗೆ 35 ವರ್ಷ ಮೀರಿರಬಾರದು. 4. ವಯಸ್ಸಿನ ಮಿತಿಯನ್ನು ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ರಾಜ್ಯ/ಕೇಂದ್ರ ಸರ್ಕಾರಿ ನೌಕರರು/ಮಾಜಿ ಸೈನಿಕರು/ಅಂಗವಿಕಲ ಅರ್ಭ್ಯರ್ಥಿಗಳು ಹಾಗೂ ವಿಧವೆಯರ ಬಗ್ಗೆ ಕೆ.ಸಿ.ಎಸ್. (ಸಾಮಾನ್ಯ ನೇಮಕಾತಿ) ನಿಯಮಗಳು 1977 ರ ಪ್ರಕಾರ ಸಡಿಲಿಕೆಯನ್ನು ಕೊಡಲಾಗುವುದು.

ಅಭ್ಯರ್ಥಿಗಳಿಗೆ ಸೂಚನೆಗಳು:-

1. ಅಭ್ಯರ್ಥಿಯು ಈ ಅಧಿಸೂಚನೆಯಲ್ಲಿ ಲಗ್ತೀಕರಿಸಿದ ನಿಗದಿತ ಅರ್ಜಿ ನಮೂನೆಯಲ್ಲಿ ಬೆರಳಚ್ಚು ಮಾಡಿಸಿದ ಅಥವಾ ಗಣಕೀಕೃತ ಅರ್ಜಿಯನ್ನು ತನ್ನ ಕೈ ಬರವಣಿಗೆಯಲ್ಲಿ ಭರ್ತಿ ಮಾಡಿ ಸಲ್ಲಿಸತಕ್ಕದ್ದು.
2. ಒಂದಕ್ಕಿಂತ ಹೆಚ್ಚು ಹುದ್ದೆಗಳಿಗೆ ಅರ್ಜಿ ಹಾಕಲು ಬಯಸುವವರು ಆಯಾ ಹುದ್ದೆಗಳಿಗೆ ಪ್ರತ್ಯೇಕವಾಗಿ ನಿಗದಿತ ಅರ್ಜಿ ನಮೂನೆಗಳಲ್ಲಿ ಅರ್ಜಿ ಸಲ್ಲಿಸತಕ್ಕದ್ದು.
3. ಅಭ್ಯರ್ಥಿಯು ಇತ್ತೀಚಿನ ಪಾಸ್ ಪೋರ್ಟ್ ಅಳತೆಯ ಭಾವಚಿತ್ರವನ್ನು ಅರ್ಜಿ ನಮೂನೆಯಲ್ಲಿ ತೋರಿಸಿರುವ ಜಾಗದಲ್ಲಿ ಅಂಟಿಸಿ ಅದರ ಮೇಲೆ ಸಹಿ ಮಾಡತಕ್ಕದ್ದು.
4. ಅರ್ಜಿ ನಮೂನೆಯೊಂದಿಗೆ ಸಲ್ಲಿಸಬೇಕಾಗಿರುವ ಶೈಕ್ಷಣಿಕ ವಿದ್ಯಾರ್ಹತೆಯ ಅಂಕಪಟ್ಟಿಗಳನ್ನು ಹಾಗೂ ಇತರೆ ಪ್ರಮಾಣ ಪತ್ರಗಳನ್ನು ಸ್ವಯಂ ದೃಢೀಕರಿಸತಕ್ಕದ್ದು. ಅರ್ಜಿಯೊಂದಿಗೆ ಮೂಲಪ್ರತಿಗಳನ್ನು ಲಗತ್ತಿಸುವ ಅವಶ್ಯಕತೆ ಇರುವುದಿಲ್ಲ, ಲಗತ್ತಿಸಲಾಗಿರುವ ಪ್ರಮಾಣಪತ್ರಗಳು ಅರ್ಜಿ ಸಲ್ಲಿಸುವ ದಿನಾಂಕದ ಮುಂಚಿತವಾಗಿ ಪಡೆದಿರಬೇಕು.
5. ಅಭ್ಯರ್ಥಿಗಳು ನೇಮಕಾತಿ ಸಂಬಂಧದಲ್ಲಿ ಯಾವುದೇ ಅಕ್ರಮ ಮತ್ತು ಅನುಚಿತ ಮಾರ್ಗವನ್ನು ಅನುಸರಿಸುವುದು ಕಂಡುಬಂದಲ್ಲಿ ಅಂತಹವರನ್ನು ನೇಮಕಾತಿಗೆ ಪರಿಗಣಿಸಲಾಗುವುದಿಲ್ಲ.
6. ಅಪೂರ್ಣವಾಗಿರುವ, ಸಹಿ ಮಾಡದ ಮತ್ತು ವಿದ್ಯಾರ್ಹತೆ, ಮೀಸಲಾತಿ ಹಾಗೂ ವಯೋಮಿತಿ ರಿಯಾಯಿತಿ ಬಗ್ಗೆ ಸಂಬಂಧಪಟ್ಟ ದಾಖಲೆಗಳನ್ನು ಹೊಂದಿರದ ಅಭ್ಯರ್ಥಿಗಳ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.
7. ಸರ್ಕಾರಿ ಮತ್ತು ಅರೆ-ಸರ್ಕಾರಿ ಸೇವೆಯಲ್ಲಿರುವ ಅಭ್ಯರ್ಥಿಗಳು ತಮ್ಮ ಅರ್ಜಿಗಳನ್ನು ಸಮೂಚಿತ ಮಾರ್ಗದ ಮುಖಾಂತರ ಸಲ್ಲಿಸಬೇಕು.
8. ಅಭ್ಯರ್ಥಿಗಳು ತಮ್ಮ ಅರ್ಜಿಯ ಜೊತೆ 5-00 ರೂಪಾಯಿಗಳ ಅಂಚೆ ಚೀಟಿ ಲಗತ್ತಿಸಿರುವ ಸ್ವವಿಳಾಸವಿರುವ ಲಕೋಟೆಯನ್ನು ಲಗತ್ತಿಸಿರಬೇಕು.
9. ಅರ್ಜಿದಾರರು ಯಾವ ಹುದ್ದೆಗಳಿಗೆ ಅರ್ಜಿಗಳನ್ನು ಸಲ್ಲಿಸುತ್ತಿದ್ದಾರೆಂಬುದನ್ನು ದಪ್ಪ ಅಕ್ಷರಗಳಲ್ಲಿ ಲಕೋಟೆಯ ಮೇಲೆ ನಮೂದಿಸಿರಬೇಕು.
10. ಅಭ್ಯರ್ಥಿಗಳು ತಮ್ಮ ಸ್ವಂತ ಖರ್ಚಿನಲ್ಲಿ ಸಂದರ್ಶನಕ್ಕೆ ಹಾಜರಾಗುವುದು.
11. ಖಾಲಿ ಹುದ್ದೆಗಳ ಸಂಖ್ಯೆ ಬದಲಾವಣೆಗೊಳ್ಳುವ ಸಂಭವವಿರುತ್ತದೆ.
12. ನೇಮಕಾತಿಯು ತಾತ್ಕಾಲಿಕವಾಗಿದ್ದು 2 ವರ್ಷದ ಪರೀಕ್ಷಾರ್ಹ ಅವಧಿಯನ್ನು ಪೂರ್ಣಗೊಳಿಸಬೇಕಾಗಿರುತ್ತದೆ.
13. ಕರ್ನಾಟಕ ನಾಗರೀಕ ಸೇವಾ ಸಾಮಾನ್ಯ ನೇಮಕಾತಿ ನಿಯಮಗಳು 1977 ರ ಪ್ರಕಾರ ಅಥವಾ ಇನ್ನಾವುದೇ ನಿಯಮಗಳ ಪ್ರಕಾರ ಅಭ್ಯರ್ಥಿಯು ಅನರ್ಹನಾಗಿದ್ದಲ್ಲಿ ನೇಮಕಾತಿಗೆ ಅರ್ಹರಾಗುವುದಿಲ್ಲ.
14. ಅಭ್ಯರ್ಥಿಗೆ ಸಂದರ್ಶನಕ್ಕೆ ಹಾಜರಾಗಲು ಮಾಹಿತಿ ಸಿಗದಿದ್ದ ಪಕ್ಷದಲ್ಲಿ ಅವರು ಸಂದರ್ಶನಕ್ಕೆ ಹಾಜರಾಗಲು ಅನರ್ಹರೆಂದು ತಿಳಿಯತಕ್ಕದ್ದು. ಈ ಬಗ್ಗೆ ಯಾವುದೇ ಪತ್ರ ವ್ಯವಹಾರ ನಡೆಸಲಾಗುವುದಿಲ್ಲ.

ಅಭ್ಯರ್ಥಿಯು ಲಗತ್ತಿಸಬೇಕಾದ ಪ್ರಮಾಣಪತ್ರಗಳು:

1. ವಯಸ್ಸಿನ ಬಗ್ಗೆ ದಾಖಲಾತಿ ಪತ್ರ ಅಥವಾ ಶಾಲಾ ವರ್ಗಾವಣೆ ಪತ್ರ ಇತ್ಯಾದಿ.
2. ಜಾತಿ ಮೀಸಲಾತಿ ಕೋರುವ ಅಭ್ಯರ್ಥಿಗಳು ಚಾಲ್ತಿಯಲ್ಲಿರುವ ನಿಗದಿತ ನಮೂನೆಯಲ್ಲಿ ಸಕ್ಷಮ ಪ್ರಾಧಿಕಾರದಿಂದ ಪಡೆದಿರುವ ಪ್ರಮಾಣಪತ್ರ.
3. ಗ್ರಾಮೀಣ ಮೀಸಲಾತಿ ಪ್ರಮಾಣಪತ್ರ ಚಾಲ್ತಿ ನಮಾನೆ-1/ ನಮಾನೆ-2 ರಲ್ಲಿ.
4. ಕನ್ನಡ ಮಾಧ್ಯಮದಲ್ಲಿ ವ್ಯಾಸಂಗಮಾಡಿದ ಬಗ್ಗೆ ಚಾಲ್ತಿ ನಮೂನೆಯಲ್ಲಿರುವ ಪ್ರಮಾಣಪತ್ರ.
5. ಅಂಗವಿಕಲ ಅಭ್ಯರ್ಥಿಗಳು ನಿಗದಿಪಡಿಸಿದ ನಮೂನೆಯಲ್ಲಿ ಪಡೆದ ಪ್ರಮಾಣಪತ್ರ(ಶೇಕಡಾ 40 ಕ್ಕಿಂತ ಕಡಿಮೆ ಇಲ್ಲದಂತಹ ಅಂಗವಿಕಲತೆ)
6. ವಿಧವೆಯರು ವಯೋಮಿತಿ ಸಡಿಲಿಕೆಗಾಗಿ ಸಕ್ಷಮ ಪ್ರಾಧಿಕಾರದಿಂದ ಪಡೆದ ಪ್ರಮಾಣಪತ್ರ.
7. ಸೈನಿಕ ಸೇವೆಯಿಂದ ಬಿಡುಗಡೆಯಾದ/ಮುಕ್ತಿ ಹೊಂದಿದ ಕುರಿತಾದ ಪ್ರಮಾಣಪತ್ರ.

ಆಯ್ಕೆಯ ವಿಧಾನ:-

ಅಭ್ಯರ್ಥಿಗಳ ಆಯ್ಕೆಯು ಕರ್ನಾಟಕ ಅಧೀನ ನ್ಯಾಯಾಲಯಗಳ (ಲಿಪಿಕ ಮತ್ತು ಇತರ ಹುದ್ದೆಗಳ)(ನೇಮಕಾತಿ)(ತಿದ್ದುಪಡಿ) ನಿಯಮ 2007 ರ ಪ್ರಕಾರ ನಡೆಸಲಾಗುವುದು.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಉತ್ತರ ಕನ್ನಡ, ಕಾರವಾರ.

ಅರ್ಜಿ ನಮೂನೆ

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಉತ್ತರ ಕನ್ನಡ ಜಿಲ್ಲೆ ಕಾರವಾರ

ಅಧಿಸೂಚನೆ ಸಂಖ್ಯೆ : 2/2013 ದಿನಾಂಕ : 24.01.2013

ಸ್ವಯಂ ದೃಢೀಕೃರಿಸಿದ ಇತ್ತೀಚಿನ ಪಾಸ್‌ಪೋರ್ಟ್ ಭಾವ ಚಿತ್ರ ಲಗತ್ತಿಸುವದು

________________ಹುದ್ದೆಗೆ ಅರ್ಜಿ

ಗೆ

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಕಾರವಾರ.

1.	ಅಭ್ಯರ್ಥಿಯ ಪೂರ್ಣ ಹೆಸರು (ದಪ್ಪ ಅಕ್ಷರಗಳಲ್ಲಿ)			
2.	ಅಭ್ಯರ್ಥಿಯ ತಂದೆ/ತಾಯಿ/ಗಂಡನ ಹೆಸರು			
3.	ಅಭ್ಯರ್ಥಿಯ ಹುಟ್ಟಿದ ದಿನಾಂಕ ಮತ್ತು ವಯಸ್ಸು			
4.	ಅಂಚೆ ವಿಳಾಸ			
5.	ಅಭ್ಯರ್ಥಿಯ ವಿದ್ಯಾರ್ಹತೆ	ಪಡೆದ ಅಂಕಗಳು	ಗರಿಷ್ಠ ಅಂಕಗಳು	ಶೇಕಡಾವಾರು
6.	ಅ. ಏಳನೆ ತರಗತಿ			
	ಆ. ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ಪರೀಕ್ಷೆ			
	ಇ. ಇಂಗ್ಲಿಷ ಶೀಘ್ರಲಿಪಿ ಹಿರಿಯ ಶ್ರೇಣಿ			
	ಈ. ಕನ್ನಡ ಶೀಘ್ರಲಿಪಿ ಹಿರಿಯ ಶ್ರೇಣಿ			
	ಉ. ಇಂಗ್ಲಿಷ ಬೆರಳಚ್ಚು ಹಿರಿಯ ಶ್ರೇಣಿ			
	ಊ. ಕನ್ನಡ ಬೆರಳಚ್ಚು ಹಿರಿಯ ಶ್ರೇಣ			
	ಋ. ಇಂಗ್ಲಿಷ ಬೆರಳಚ್ಚು ಕಿರಿಯ ಶ್ರೇಣಿ			
	ಎ. ಕನ್ನಡ ಬೆರಳಚ್ಚು ಕಿರಿಯ ಶ್ರೇಣಿ			
	ಏ. ಅಭ್ಯರ್ಥಿಯು ಮೋಟಾರು ವಾಹನ ಚಾಲನಾ ಪರವಾನಿಗೆಯನ್ನು ಹೊಂದಿದ್ದರೆ ನಮಾದಿಸುವುದು ಮತ್ತು ಲಗತ್ತಿಸುವುದು. (ಜಾರಿಕಾರರಿಗೆ ಮಾತ್ರ)			
7.	ಇತರ ಯಾವುದೇ ನಿಗದಿಪಡಿಸಿದ ಅರ್ಹತಾ ಪರೀಕ್ಷೆ			
8.	ಅಭ್ಯರ್ಥಿಯ ರಾಷ್ಟ್ರೀಯತೆ ಹಾಗೂ ವರ್ಗಾವಣೆ ಪ್ರಪತ್ರದಲ್ಲಿ ನಮೂದಿಸಿರುವಂತೆ ಜಾತಿ.			
9.	ಅಭ್ಯರ್ಥಿಯು ಮುಂದೆ ತೋರಿಸಿದ ಯಾವ ವರ್ಗವನ್ನು ಹೊಂದಿರುವುನೆಂಬುದನ್ನು ನಮೂದಿಸುವುದು ಮತ್ತು ಸಂಬಂದಪಟ್ಟ ಪ್ರಾಧಿಕಾರದಿಂದ ಪಡೆದ ನಿಗದಿತ ನಮೂನೆಯಲ್ಲಿರುವ ಪ್ರಪತ್ರವನ್ನು ಲಗತ್ತಿಸುವುದು.	ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ/ ಪ್ರವರ್ಗ–1, ಪ್ರವರ್ಗ–2ಎ, ಪ್ರವರ್ಗ–2ಬಿ, ಪ್ರವರ್ಗ–3ಎ, ಪ್ರವರ್ಗ–3 ಬಿ		

10.	ಅಭ್ಯರ್ಥಿಯು ಮುಂದೆ ತೋರಿಸಿದ ಯಾವ ಮೀಸಲಾತಿಯನ್ನು ಹೊಂದಿರುವುನೆಂಬುದನ್ನು ನಮೂದಿಸುವುದು ಮತ್ತು ಸಂಬಂದಪಟ್ಟ ಪ್ರಾಧಿಕಾರದಿಂದ ಪಡೆದ ನಿಗದಿತ ನಮೂನೆಯಲ್ಲಿರುವ ಪ್ರಪತ್ರವನ್ನು ಲಗತ್ತಿಸುವುದು.	ಮಾಜಿ–ಸೈನಿಕ/ವಿಧವೆ/ದೈಹಿಕ ಅಂಗವಿಕಲ/ಗ್ರಾಮೀಣ ಅಭ್ಯರ್ಥಿ/ ಕನ್ನಡ ಮಾಧ್ಯಮ ಅಭ್ಯರ್ಥಿ/ಯೋಜನಾ ನಿರಾಶ್ರಿತ
11.	ಅಭ್ಯರ್ಥಿಯು ಕೇಂದ್ರ / ರಾಜ್ಯ ಸರ್ಕಾರದ ಇಲಾಖೆಗಳಲ್ಲಿ ಈಗಾಗಲೇ ಸೇವೆಯಲ್ಲಿದ್ದರೆ ವಿವರಗಳನ್ನು ನಮೂದಿಸುವುದು ಮತ್ತು ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು ಲಗತ್ತಿಸುವುದು.	
12.	ಅಭ್ಯರ್ಥಿಯು ವಿವಾಹಿತನಾಗಿರುವನೋ? ವಿವಾಹಿತನಾಗಿದ್ದಲ್ಲಿ ಎ) ಒಂದಕ್ಕಿಂತ ಹೆಚ್ಚು ಜೀವಿತ ಪತ್ನಿಯರನ್ನು ಹೊಂದಿದ್ದಾನೆಯೋ? ವಿವಾಹಿತಳಾಗಿದ್ದಲ್ಲಿ ಬಿ) ಒಂದಕ್ಕಿಂತ ಹೆಚ್ಚು ಜೀವಿತ ಪತ್ನಿಯರನ್ನು ಹೊಂದಿದ ವ್ಯಕ್ತಿಯೊಡನೆ ವಿವಾಹವಾಗಿದೆಯೋ?	
13.	ಅಭ್ಯರ್ಥಿಯು ಯಾವುದಾದರೂ ಅಪರಾಧ ಮೊಕದ್ದಮೆಯಲ್ಲಿ ಅಪಾದಿತನಾಗಿರುವನೋ? ಹಾಗಿದ್ದಲ್ಲಿ ಅಂತಹ ಅಪರಾಧ ಪ್ರಕರಣದ ಕ್ರಮ ಸಂಖ್ಯೆ ಹಾಗೂ ಯಾವ ನ್ಯಾಯಾಲಯದಲ್ಲಿ ಸದರಿ ಪ್ರಕರಣ ಚಾಲ್ತಿಯಲ್ಲಿದೆಯೋ ಆ ನ್ಯಾಯಾಲಯದ ಹೆಸರು ಮತ್ತು ಸ್ಥಳ.	

ಸೂಚನೆಃ ಅಭ್ಯರ್ಥಿಗಳು ಎಲ್ಲಾ ಕಾಲಂಗಳನ್ನು ಕಡ್ಡಾಯವಾಗಿ ಭರ್ತಿ ಮಾಡತಕ್ಕದ್ದು.

ಈ ಮೇಲ್ಕಂಡ ಮಾಹಿತಿಗಳು ನನಗೆ ತಿಳಿದ ಮಟ್ಟಿಗೆ ಸತ್ಯ ಮತ್ತು ಸರಿಯಾಗಿವೆಯೆಂದು ಪ್ರಮಾಣೀಕರಿಸುತ್ತೇನೆ ಮತ್ತು ಒಂದು ವೇಳೆ ಮೇಲ್ಕಂಡ ಮಾಹಿತಿಗಳು ತಪ್ಪು ಎಂದು ಕಂಡು ಬಂದಲ್ಲಿ ನನ್ನ ಅಭ್ಯರ್ಥಿತನವನ್ನು ರದ್ದುಪಡಿಸಬಹುದು ಎಂದು ಈ ಮೂಲಕ ಘೋಷಿಸುತ್ತೇನೆ.

ಸ್ಥಳ ಃ

ದಿನಾಂಕ ಃ ಅಭ್ಯರ್ಥಿಯ ಸಹಿ

PR.14

ಜಿಲ್ಲಾಧಿಕಾರಿಯವರ ಕಾರ್ಯಾಲಯ, ಚಾಮರಾಜನಗರ ಜಿಲ್ಲೆ, ಚಾಮರಾಜನಗರ

OFFICE OF THE DEPUTY COMMISSISONER, CHAMARAJANAGAR DISTRICT,CHAMARAJANAGAR

ಅಧ್ಯಕ್ಷರು,ಆಯ್ಕೆ ಪ್ರಾಧಿಕಾರ ಮತ್ತು ನೇಮಕಾತಿ ಪ್ರಾಧಿಕಾರ ಹಾಗೂ ಜಿಲ್ಲಾಧಿಕಾರಿಗಳು, ಚಾಮರಾಜನಗರ ಜಿಲ್ಲೆ, ಚಾಮರಾಜನಗರ.

ತಿದ್ದುಪಡಿ ಅಧಿಸೂಚನೆ

ಸಂ:ಸಿಬ್ಬಂದಿ(3)ಸಿಆರ್/188/2012–13ದಿನಾಂಕ:21–12–2012

ವಿಷಯ ಚಾಮರಾಜನಗರ ಜಿಲ್ಲೆಯ ಕಂದಾಯ ಇಲಾಖೆಯಲ್ಲಿ ಗ್ರಾಮಲೆಕ್ಕಾಧಿಕಾರಿಗಳ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ.

ಉಲ್ಲೇಖ: ಈ ಕಛೇರಿ ಅಧಿಸೂಚನೆ ಸಮಸಂಖ್ಯೆ ದಿನಾಂಕ 28–08–2012

ಸರ್ಕಾರದ ಅಧಿಸೂಚನೆ ಸಂಖ್ಯೆ:ಕಂಇ/299/ಬಿಎಸ್‌ಸಿ/2006 ದಿನಾಂಕ:08–09–2009 ರ ಮೇರೆಗೆ ಕರ್ನಾಟಕ ನಾಗರೀಕ ಸೇವೆಗಳು (Revenue Subordinate Branch) ವೃಂದ ಮತ್ತು ನೇಮಕಾತಿ ತಿದ್ದುಪಡಿ ನಿಯಮಗಳು 2008ರ ರೀತ್ಯಾ ಕಂದಾಯ ಇಲಾಖೆಯಲ್ಲಿ ಖಾಲಿ ಇರುವ ಗ್ರಾಮ ಲೆಕ್ಕಾಧಿಕಾರಿಗಳ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿಮಾಡಲು ಅವಕಾಶ ಕಲ್ಪಿಸಿದೆ.

ಅದರಂತೆ ಚಾಮರಾಜನಗರ ಜಿಲ್ಲೆಯ ಕಂದಾಯ ಇಲಾಖೆಯಲ್ಲಿ ಗ್ರಾಮ ಲೆಕ್ಕಾಧಿಕಾರಿಗಳ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಕುರಿತು ಅರ್ಹ ಅಭ್ಯರ್ಥಿಗಳಿಂದ ಈ ಕೆಳಗಿನ ಷರತ್ತುಗಳಿಗೆ ಒಳಪಟ್ಟು ಉಲ್ಲೇಖದಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು. ಉಲ್ಲೇಖಿತ ಅಧಿಸೂಚನೆಯಲ್ಲಿ ಕೈ ತಪ್ಪಿನಿಂದಾಗಿ ರೋಸ್ಟರ್ ಬಿಂದು ಅಳವಡಿಕೆಯಲ್ಲಿ ಕೆಲವು ಲೋಪದೋಷಗಳು ಕಂಡುಬಂದಿದ್ದು, ಈ ಲೋಪದೋಷಗಳನ್ನು ಸರಿಪಡಿಸಿ ಈ ಕೆಳಕಂಡಂತೆ ತಿದ್ದುಪಡಿ ಅಧಿಸೂಚನೆ ಹೊರಡಿಸಲಾಗಿದೆ.

ಖಾಲಿ ಹುದ್ದೆಗಳ ವಿವರ

ಹುದ್ದೆಯ ಹೆಸರು: ಗ್ರಾಮಲೆಕ್ಕಿಗರು **ಒಟ್ಟು ಖಾಲಿ ಹುದ್ದೆ: 46 (ನಲವತ್ತಾರು)**

ಕ್ರಮ ಸಂಖ್ಯೆ	ವರ್ಗೀಕರಣ	ಪ.ಜಾ	ಪ.ಪಂ	ವ–1	ವ–2ಎ	ವ–2ಬಿ	ವ–3ಎ	ವ–3ಬಿ	ಸಾ.ಅ	ಒಟ್ಟು
1	ಸಾಮಾನ್ಯ	1	–	–	1	–	–	–	4	06
2	ಮಹಿಳೆ	2	1	–	2	–	–	–	7	12
3	ಗ್ರಾಮೀಣ	2	–	1	2	1	1	1	6	14
4	ಮಾಜಿ ಸೈನಿಕ	1	–	–	1	–	–	–	2	04
5	ಕನ್ನಡ ಮಾಧ್ಯಮ	1	–	–	1	–	–	–	1	03
6	ಯೋಜನಾ ನಿರಾಶ್ರಿತ	–	–	–	–	–	–	–	1	01
7	ಅಂಗವಿಕಲರು	–	–	1	–	1	1	1	2	06
	ಒಟ್ಟು:	07	01	02	07	02	02	02	23	46

ಸಂ:1 ಹುದ್ದೆಗೆ ನಿಗಧಿಪಡಿಸಿರುವ ವಿದ್ಯಾರ್ಹತೆ:

ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಉತ್ತೀರ್ಣ ಅಥವಾ ಸಿ.ಬಿ.ಎಸ್.ಇ./ಐ.ಸಿ.ಎಸ್.ಇ. ರವರು ನಡೆಸುವ 12ನೇ ತರಗತಿ ಪರೀಕ್ಷೆಯಲ್ಲಿ ತೇರ್ಗಡೆಯಾಗಿರತಕ್ಕದ್ದು. ಈ ವಿದ್ಯಾರ್ಹತೆಯನ್ನು ಅಧಿಸೂಚನೆ ಹೊರಡಿಸುವ ದಿನಾಂಕಕ್ಕೆ ಮುಂಚಿತವಾಗಿ ಹೊಂದಿರತಕ್ಕದ್ದು.

ಸಂ:2 ಹುದ್ದೆಗೆ ನಿಗದಿಪಡಿಸಿರುವ ವೇತನಶ್ರೇಣಿ: ರೂ: 11600 – 21000

ಸಂ:3 ಹುದ್ದೆಗೆ ನಿಗದಿಪಡಿಸಿರುವ ವಯೋಮಿತಿ:

ಕ್ರಮ ಸಂಖ್ಯೆ	ವರ್ಗ	ವಯೋಮಿತಿ
1	ಪ್ರವರ್ಗ–1 ಪ.ಜಾ/ಪ.ವರ್ಗ	18–40 ವರ್ಷ
2	ಪ್ರವರ್ಗ–2ಎ/2ಬಿ/3ಎ/3ಬಿ	18–38 ವರ್ಷ
3	ಸಾಮಾನ್ಯ	18–35 ವರ್ಷ

ಸಂ:3 ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಶುಲ್ಕ:

ಕ್ರಮ ಸಂಖ್ಯೆ	ವರ್ಗ	ಶುಲ್ಕ	ಪಾವತಿಸುವ ವಿಧಾನ
1	ಸಾಮಾನ್ಯ	ರೂ:200–00	ಚಾಮರಾಜನಗರ ಜಿಲ್ಲಾಡಳಿತ ಭವನ ಸಂಕೀರ್ಣದಲ್ಲಿರುವ ಎಸ್.ಬಿ.ಎಂ.ಬ್ಯಾಂಕಿನ ಖಾತೆ ಸಂಖ್ಯೆ 64050010864 ಗೆ ಜಮಾ ಮಾಡತಕ್ಕದ್ದು.
2	ಪರಿಶಿಷ್ಠ ಜಾತಿ/ಪರಿಶಿಷ್ಠ ವರ್ಗ, ಪ್ರ.ವ–1, ಮಾಜಿ ಸೈನಿಕ ಹಾಗೂ ಅಂಗವಿಕಲ ಅಭ್ಯರ್ಥಿಗಳಿಗೆ	ರೂ:100–00	

ಸಂ:4 ಹುದ್ದೆಯ ಆಯ್ಕೆ ವಿಧಾನ:

ಅಭ್ಯರ್ಥಿಯು ದ್ವಿತೀಯ ಪಿ.ಯು.ಸಿ./ಸಿ.ಬಿ.ಎಸ್.ಇ/ಐ.ಸಿ.ಎಸ್.ಇ. ಪರೀಕ್ಷೆಯಲ್ಲಿ ಗಳಿಸಿದ ಅಂಕಗಳ ಶೇಕಡವಾರು ಮೆರಿಟ್ ಆಧಾರದಲ್ಲಿ ಮೀಸಲಾತಿಗೆ ಅನುಗುಣವಾಗಿ ಸರ್ಕಾರದ ಅಧಿಸೂಚನೆ ಸಂಖ್ಯೆ: RD.299 BSC 2009 ದಿನಾಂಕ: 03–02–2009 ರನ್ವಯ ಆಯ್ಕೆ ಮಾಡಲಾಗುವುದು

ನಿಬಂಧನೆಗಳು:

1 ಅಭ್ಯರ್ಥಿಯು ಆನ್‌ಲೈನ್ ವೆಬ್‌ಸೈಟ್ http://chamarajanagara-va.kar.nic.in ಮುಖಾಂತರ ಅರ್ಜಿಗಳನ್ನು ನಿಗಧಿಪಡಿಸಿದ ದಿನಾಂಕದೊಳಗೆ ಅಥವಾ ಅದಕ್ಕೂ ಮುಂಚಿತವಾಗಿ ಸಲ್ಲಿಸಬೇಕು.ನಿಗಧಿಪಡಿಸಿದ ಅವಧಿ ನಂತರ ಬಂದ ಅರ್ಜಿಗಳನ್ನು ಯಾವುದೇ ಕಾರಣಕ್ಕೂ ಪರಿಗಣಿಸಲಾಗುವುದಿಲ್ಲ.

2 ನೇಮಕಾತಿ ಹೊಂದಿದ ಅಭ್ಯರ್ಥಿಗಳು, ಎರಡು (02) ವರ್ಷಗಳ ಪರಿವೀಕ್ಷಣಾವಧಿ ಪೂರೈಸುವುದು ಕಡ್ಡಾಯವಾಗಿರುತ್ತದೆ.

3 ಪ್ರಕಟಿಸಿರುವ ಹುದ್ದೆಗಳನ್ನು ಹೆಚ್ಚು ಮಾಡುವ ಅಥವಾ ಕಡಿಮೆ ಮಾಡುವ ಹಕ್ಕನ್ನು ನೇಮಕಾತಿ ಪ್ರಾಧಿಕಾರವು ಹೊಂದಿರುತ್ತದೆ.

4 ತಪ್ಪು ಮಾಹಿತಿ ಒದಗಿಸಿದ ಅಭ್ಯರ್ಥಿಗಳನ್ನು ಆಯ್ಕೆಗೆ ಪರಿಗಣಿಸಲಾಗುವುದಿಲ್ಲ ಹಾಗೂ ಅಂತಹ ಅರ್ಜಿಗಳನ್ನು ಮುನ್ಸೂಚನೆ ನೀಡದೇ ತಿರಸ್ಕರಿಸಲಾಗುವುದು

5 ಅರ್ಜಿಯನ್ನು ಸ್ವೀಕರಿಸಲು ನಿಗಧಿಪಡಿಸಿರುವ ಅಂತಿಮ ದಿನಾಂಕವು ಸಾರ್ವಜನಿಕ ರಜಾ ದಿನವಾಗಿ ಘೋಷಿಸಲ್ಪಟ್ಟರೆ ಆ ದಿನಾಂಕದ ಮಾರನೆ ದಿನವನ್ನು ಅರ್ಜಿ ಸ್ವೀಕರಿಸಲು ಕೊನೆ ದಿನಾಂಕವಾಗಿರುತ್ತದೆ.

6 ಈ ಅಧಿಸೂಚನೆ ಅನ್ವಯ ನೇಮಕಾತಿ ಹೊಂದುವ ಅಭ್ಯರ್ಥಿಗಳು ಜಿಲ್ಲೆಯ ಯಾವುದೇ ತಾಲ್ಲೂಕು ಗಳಲ್ಲಾದರೂ ಸೇವೆ ಸಲ್ಲಿಸಲು ಬದ್ಧರಾಗಿರಬೇಕು ಹಾಗೂ ತಾಲ್ಲೂಕು ಕಛೇರಿಯ ಭೂಮಿ ಕೇಂದ್ರದಲ್ಲಿ ಸೇವೆ ಸಲ್ಲಿಸಲು ಬದ್ಧರಾಗಿರಬೇಕು.

7 ಅರ್ಜಿಯನ್ನು ಆನ್‌ಲೈನ್ ವೆಬ್‌ಸೈಟ್ ವಿಳಾಸ http://chamarajanagara-va.kar.nic.in ರಲ್ಲಿ ತುಂಬಿ ಆನ್‌ಲೈನ್ ಚಲನ್ ಪ್ರಿಂಟ್ ತೆಗೆದುಕೊಂಡು, ಹಣವನ್ನು ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಚಾಮರಾಜನಗರ ಖಾತೆ ಸಂಖ್ಯೆ 64050010864 ಗೆ ಜಮಾ ಮಾಡಿ ಅಭ್ಯರ್ಥಿ ಚಲನ್ ಕಾಪಿಯನ್ನು ಸ್ಕ್ಯಾನ್ ಮಾಡಿ ಆನ್‌ಲೈನ್ ವಿಳಾಸದಲ್ಲಿ ಅಪ್‌ಲೋಡ್ ಮಾಡಬೇಕು, ಹಾಗು ನೇಮಕಾತಿ ಪ್ರಕ್ರಿಯೆ ಮುಗಿಯುವವರೆಗೆಚಲನ್ ಕಾಪಿಯನ್ನು ಅಭ್ಯರ್ಥಿಗಳು ಸಂರಕ್ಷಿಸಬೇಕು.

8 ಪೂರ್ಣ ಮಾಹಿತಿಯನ್ನು/ಅಗತ್ಯವಿರುವ ಪ್ರಮಾಣಪತ್ರಗಳನ್ನು ಪರಿಶೀಲನಾ ಸಂಧರ್ಭದಲ್ಲಿ ಹಾಜರುಪಡಿಸದೇ ಇದ್ದಲ್ಲಿ ಯಾವುದೇ ಮುನ್ಸೂಚನೆ ಇಲ್ಲದೇ ತಿರಸ್ಕರಿಸಲಾಗುವುದು.

9 ಅಭ್ಯರ್ಥಿಗಳಿಗೆ ಕನ್ನಡ ಬಾಷಾ ಜ್ಞಾನದ ಅವಶ್ಯಕತೆ ಕಡ್ಡಾಯವಾಗಿರುತ್ತದೆ.

10 ಆಯ್ಕೆ ಪ್ರಾಧಿಕಾರವು ಗ್ರಾಮಲೆಕ್ಕಿಗರ ಹುದ್ದೆಗಳ ಭರ್ತಿ ಮಾಡುವ ವಿಚಾರ ಕುರಿತು ಪೂರ್ಣ ಅಧಿಕಾರವನ್ನು ಕಾಯ್ದಿರಿಸಿಕೊಂಡಿದೆ.

11 ಮೇಲಿನ ಹುದ್ದೆಗಳಿಗೆ ನೇಮಕಾತಿ ಬಗ್ಗೆ ಅಂತಿಮ ತೀರ್ಮಾನವನ್ನು ಆಯ್ಕೆ ಪ್ರಾಧಿಕಾರಿಯಾದ ಜಿಲ್ಲಾಧಿಕಾರಿಗಳು ಚಾಮರಾಜನಗರ ಇವರು ಕಾಯ್ದಿರಿಸಿಕೊಂಡಿದ್ದಾರೆ.

12 ಅರ್ಜಿದಾರರೊಡನೆ ಪತ್ರ ವ್ಯವಹಾರಗಳಿಗೆ ಅವಕಾಶವಿರುವುದಿಲ್ಲ.

13 ಯಾವುದೇ ರೀತಿಯ ಒತ್ತಡಗಳನ್ನು ಶಿಫಾರಸ್ಸುಗಳನ್ನು ಮಾಡಿದರೆ ಅಂತಹವರ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

14 ಜಾತಿ ಅಡಿಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳು ಜಾತಿ ಪ್ರಮಾಣ ಪತ್ರದ ಬಗ್ಗೆ ಜಿಲ್ಲಾಧಿಕಾರಿಗಳು (ಅಧ್ಯಕ್ಷರು, ಮತ್ತು ಜಾತಿ ಆದಾಯ ಪರಿಶೀಲನಾ ಸಮಿತಿ) ರವರಿಂದ ಸಿಂಧುತ್ವ ಪ್ರಮಾಣ ಪತ್ರ ಪಡೆದ ನಂತರ ನೇಮಕಾತಿ ಆದೇಶ ನೀಡಲಾಗುವುದು.

15 ಆಯ್ಕೆಯು ಸರ್ಕಾರದಿಂದ ಕಾಲಕಾಲಕ್ಕೆ ಹೊರಡಿಸುವ ನಿಯಮಗಳಿಗೆ ಒಳಪಟ್ಟಿರುತ್ತದೆ.

16 ಅಪೂರ್ಣವಾದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

17 ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 08226-223160, 08226-223170, 08226-224590 ಗಳನ್ನು ಸಂಪರ್ಕಿಸ ಬಹುದಾಗಿರುತ್ತದೆ.

ಅರ್ಜಿದಾರರು ಪರಿಶೀಲನಾ ದಿನಾಂಕದಂದು ಈ ಕೆಳಕಂಡ ಮೂಲ ದಾಖಲಾತಿಗಳನ್ನು ಕಡ್ಡಾಯವಾಗಿ ಹಾಜರುಪಡಿಸತಕ್ಕದ್ದು

1. ಸೇವೆಯಲ್ಲಿರುವ ಅಭ್ಯರ್ಥಿಗಳು ತಮ್ಮ ಇಲಾಖಾ ಮುಖ್ಯಸ್ಥರ ಮುಖಾಂತರ ನಿರಾಕ್ಷೇಪಣಾ ಪತ್ರವನ್ನು ಹಾಜರುಪಡಿಸಬೇಕು
2. ಜನ್ಮ ದಿನಾಂಕವನ್ನು ಖಚಿತಪಡಿಸುವ ಎಸ್.ಎಸ್.ಎಲ್.ಸಿ. ಅಂಕಪಟ್ಟಿಯನ್ನು ಪರಿಶೀಲನಾ ದಿನಾಂಕ ದಂದು ಹಾಜರ್‌ಪಡಿಸಬೇಕು.
3. ಮಾಜಿ ಸೈನಿಕ ಮೀಸಲಾತಿ ಹುದ್ದೆಗೆ ಸಂಬಂಧಿಸಿದಂತೆ, ಸೈನಿಕ ಸೇವೆಯಿಂದ ಬಿಡುಗಡೆ ಹೊಂದಿದ ಅಥವಾ ಮುಕ್ತಿ ಹೊಂದಿದ ಪ್ರಪತ್ರ. ಲಗತ್ತಿಸತಕ್ಕದ್ದು.
4. ಅಂಗವಿಕಲ ಮೀಸಲಾತಿ ಪಡೆಯಲಿಚ್ಛಿಸುವ ಅಭ್ಯರ್ಥಿಗಳು ಸರ್ಕಾರದ ಆದೇಶ ಸಂ: ಸಿಆಸುಇ.115 ನೇಸನಿ. 2005 ದಿ: 19-11-2005ರಲ್ಲಿ ನಿಗಧಿಪಡಿಸಿರುವ ನಮೂನೆಯಲ್ಲಿ ಅಂಗವಿಕಲತೆಯ ಬಗ್ಗೆ ಸಂಬಂಧಪಟ್ಟ ಜಿಲ್ಲಾ ಮಟ್ಟದ ವೈದ್ಯಕೀಯ ಮಂಡಳಿಯು ನೀಡುವ ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು.
5. ಅಭ್ಯರ್ಥಿಯು ಜಾತಿ ಪ್ರಮಾಣ ಪತ್ರವನ್ನು ಸರ್ಕಾರದ ಅದೇಶ ಸಂ:ಸಕಇ/132/ಎಸ್‌ಎಡಿ/97 ದಿ:8-2-2000 ರಲ್ಲಿ ನಿಗದಿಪಡಿಸಿರುವಂತೆ ನಮೂನೆಯಲ್ಲಿ ತಾಲ್ಲೂಕು ತಹಸೀಲ್ದಾರರಿಂದ ಪಡೆದು ಹಾಜರು ಪಡಿಸಬೇಕು.
6. ಗ್ರಾಮೀಣ ಮೀಸಲಾತಿಯಡಿಯಲ್ಲಿ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ದಿ: 13-2-2001ರ ಸರ್ಕಾರದ ಆದೇಶ ಸಂ: ಸಿಆಸುಇ8/ಸೇನನಿ/2001 ರಲ್ಲಿ ನಿಗಧಿಪಡಿಸಿರುವ ನಮೂನೆಯಲ್ಲಿ ಶಾಲೆಯ ಮುಖ್ಯೋಪಾಧ್ಯಾಯರ ಸಹಿ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೇಲು ರುಜುವನ್ನು ಪಡೆದ ಪ್ರಮಾಣಪತ್ರಗಳನ್ನು ಸಲ್ಲಿಸತಕ್ಕದ್ದು. (ಅನುಬಂಧ- I)
7. ಇಬ್ಬರು ಗಣ್ಯ ವ್ಯಕ್ತಿಗಳಿಂದ ಅಥವಾ ಪತ್ರಾಂಕಿತ ಅಧಿಕಾರಿಗಳಿಂದ ಪಡೆದ ನಡತೆ ಪ್ರಮಾಣಪತ್ರ ಸಲ್ಲಿಸತಕ್ಕದ್ದು.
8. ಕನ್ನಡ ಮಾಧ್ಯಮ ಮೀಸಲಾತಿ ಪಡೆಯಲಿಚ್ಛಿಸುವವರು ಕನ್ನಡ ಮಾದ್ಯಮದಲ್ಲಿ ವ್ಯಾಸಂಗ ಮಾಡಿರುವ ಬಗ್ಗೆ ದೃಢೀಕರಣ ಪತ್ರವನ್ನು ಸಲ್ಲಿಸತಕ್ಕದ್ದು. (ಅನುಬಂಧ-III)

9. ಹುದ್ದೆಗೆ ನಿಗದಿಪಡಿಸಿರುವ ವಿದ್ಯಾರ್ಹತೆಯ ಅಂಕಪಟ್ಟಿಯನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

10. ಯೋಜನೆಗಳಿಂದ ನಿರಾಶ್ರಿತಗೊಂಡ ಬಗ್ಗೆ ಮೀಸಲಾತಿ ಕೋರುವ ಅಭ್ಯರ್ಥಿಗಳು ಸರ್ಕಾರದ ದಿನಾಂಕ:27–7–2001ರ ಅದೇಶ ಸಂ:ಡಿಪಿಎಆರ್.44.ನೇನನಿ/2001 ರಲ್ಲಿ ಸೂಚಿಸಿರುವಂತೆ ಸಕ್ಷಮ ಪ್ರಾಧಿಕಾರದಿಂದ ಪಡೆದ ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು. (ಅನುಬಂಧ–II)

11. ಅಭ್ಯರ್ಥಿಯ ಭಾವ ಚಿತ್ರವಿರುವ ಗುರುತಿನ ಚೀಟಿಯನ್ನು (ಮತದಾರರ ಗುರುತಿನ ಚೀಟಿ, ಡ್ರೈವಿಂಗ್ ಲೈಸೆನ್ಸ್ ಇತ್ಯಾದಿ) ಹಾಜರುಪಡಿಸಬೇಕು.

12. ಅಭ್ಯರ್ಥಿಯ ವಾಸಸ್ಥಳ ದೃಡೀಕರಣ ಪತ್ರ ಹಾಜರುಪಡಿಸಬೇಕು.

ಅಧ್ಯಕ್ಷರು,
ಆಯ್ಕೆ ಪ್ರಾಧಿಕಾರ ಹಾಗೂ ನೇಮಕಾತಿ ಪ್ರಾಧಿಕಾರ
ಮತ್ತು ಜಿಲ್ಲಾಧಿಕಾರಿ,
ಚಾಮರಾಜನಗರ ಜಿಲ್ಲೆ, ಚಾಮರಾಜನಗರ

PR.09

ಕಂದಾಯ ಇಲಾಖೆ

ಜಿಲ್ಲಾಧಿಕಾರಿಯವರ ಕಛೇರಿ, ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ.

ನಂ.ಸಿಬ್ಬಂದಿ(1)ಸಿಆರ್, 89 /2012-13 ದಿನಾಂಕಃ 16/01/2013

ಅಧಿಸೂಚನೆ

ಗ್ರಾಮ ಲೆಕ್ಕಿಗರುಗಳ ಹುದ್ದೆಗಳಿಗೆ ನೇಮಕಾತಿ ಬಗ್ಗೆ ಅರ್ಜಿ ಆಹ್ವಾನ

ಕರ್ನಾಟಕ ಸರ್ಕಾರದ ಕಂದಾಯ ಇಲಾಖೆಯ ಶಿವಮೊಗ್ಗ ಜಿಲ್ಲಾ ಘಟಕದಲ್ಲಿ ಬರುವ ತಾಲ್ಲೂಕುಗಳಲ್ಲಿ 2012-13ನೇ ಸಾಲಿನಲ್ಲಿ ನೇಮಕಾತಿಯ ಪ್ರಕ್ರಿಯೆಯಲ್ಲಿ ವಯೋನಿವೃತ್ತಿ, ರಾಜೀನಾಮೆ, ಮುಂಬಡ್ತಿ, ವರ್ಗಾವಣೆ ನಾಡ ಕಛೇರಿಗಳು ಸೃಷ್ಟಿಯಾಗುವುದರಿಂದ ಗ್ರಾಮಲೆಕ್ಕಾಧಿಕಾರಿ ಹುದ್ದೆಗಳು ಮಂಜೂರಾಗಿರುವುದದರಿಂದ ಹಾಗೂ ಇನ್ನಿತರ ಕಾರಣಗಳಿಂದ ತೆರವಾಗಿರುವ ಗ್ರಾಮ ಲೆಕ್ಕಿಗರ ಹುದ್ದೆಗಳನ್ನು ಕರ್ನಾಟಕ ಸಾಮಾನ್ಯ ಸೇವೆಗಳು (ರೆವಿನ್ಯೂ ಸಬಾರ್ಡಿನೇಟ್ ಬ್ರಾಂಚ್) (ಕೇಡರ್ ಅಂಡ್ ರಿಕ್ರೂಮೆಂಟ್) (ತಿದ್ದುಪಡಿ) ನಿಯಮಗಳು 2008 ಮತ್ತು 2009 ರನ್ವಯ ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಸರ್ಕಾರದ ಅರೆ ಸರ್ಕಾರಿ ಪತ್ರದ ಸಂಖ್ಯೆ ಆರ್,ಡಿ 33 ಡಿ,ಎಸ್,ಪಿ,2012 ದಿನಾಂಕ 21/06/2012 ರಂತೆ ಅನುಮೋದನೆಯಾಗಿದೆ. ಅದರಂತೆ ಗ್ರಾಮಲೆಕ್ಕಿಗರ ಖಾಲಿ ಹುದ್ದೆಗಳನ್ನು ನೇರ ನೇಮಕಾತಿಯ ಮೂಲಕವಾಗಿ ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ನಿಗದಿ ಪಡಿಸಿದ ನಮೂನೆಯಲ್ಲಿ, ಆನ್ ಲೈನ್ ಮೂಲಕವಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಗ್ರಾಮಲೆಕ್ಕಿಗರ ಖಾಲಿ ಇರುವ ಹುದ್ದೆಗಳು ಹಾಗೂ ಹುದ್ದೆಗಳ ವರ್ಗೀಕರಣಃಈ ಕೆಳಗಿನಂತಿದೆ.

2012-2013ನೇ ಸಾಲಿನ ಖಾಲಿ ಹುದ್ದೆಗಳು (ರೋಸ್ಟರ್ ಬಿಂದು 86 ರಿಂದ100 ರ ವರೆಗೆ ಹಾಗು 01ರಿಂದ 31ರವರೆಗೆ)

ಕ್ರ. ಸಂ	ವರ್ಗೀಕರಣ ವಿವರ	ಖಾಲಿ ಇರುವ ಹುದ್ದೆಗಳು	ಸಾಮಾನ್ಯ ಅಭ್ಯರ್ಥಿ	ಮಹಿಳಾ ಅಭ್ಯರ್ಥಿ	ಗ್ರಾಮೀಣ ಅಭ್ಯರ್ಥಿ	ಅಂಗವಿಕಲ ಅಭ್ಯರ್ಥಿ	ಮಾಜಿ ಸೈನಿಕರು	ಕನ್ನಡ ಮಾಧ್ಯಮ ಅಭ್ಯರ್ಥಿ	ಯೋಜನಾ ನಿರಾಶ್ರಿತ ಅಭ್ಯರ್ಥಿ	ಒಟ್ಟು
1	ಪ.ಜಾ	07	01	03	01	01	0	01	0	07
2	ಪ.ಪಂ	01	01	0	0	0	0	0	0	01
3	ಪ್ರವರ್ಗ-I	02	01	01	0	0	0	0	0	02
4	IIಎ	07	01	03	01	01	0	01	0	07
5	II ಬಿ	02	02	0	0	0	0	0	0	02
6	IIIಎ	02	02	0	0	0	0	0	0	02
7	IIIಬಿ	02	01	01	0	0	0	0	0	02
8	ಸಾಮಾನ್ಯ	23	04	07	07	02	02	01	0	23
ಒಟ್ಟು		46	13	15	09	04	02	03	0	46

ವೇತನ ಶ್ರೇಣಿಃ

ರೂ- 11600-200-12000-250-13000-300- 14200-350-15600-400-17200-450- 19000-500-21000

ಶೈಕ್ಷಣಿಕ ವಿದ್ಯಾರ್ಹತೆಃ

ದ್ವಿತೀಯ ಪಿ.ಯು.ಸಿ. ಪರೀಕ್ಷೆಯಲ್ಲಿ ICSE /CBSE ಅಥವಾ ಅಥವಾ 12ನೇ ತರಗತಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರಬೇಕು, ಕಂಪ್ಯೂಟರ್ ಜ್ಞಾನ ಹೊಂದಿರಬೇಕು.

ವಯೋಮಿತಿಃ

ಅರ್ಜಿಗಳನ್ನು ಸ್ವೀಕರಿಸಲು ನಿಗಧಿಪಡಿಸಿದ ಕೊನೆಯ ದಿನಾಂಕಕ್ಕೆ ಅಂದರೆ ದಿನಾಂಕ 15/02/2013ದಂದು ಈ ಕೆಳಗಿನಂತೆ ವಯೋಮಿತಿ ಹೊಂದಿರತಕ್ಕದ್ದು.

ವರ್ಗೀಕರಣ ವಿವರ	ಕನಿಷ್ಠ	ಗರಿಷ್ಠ
ಪ.ಜಾ/ಪ.ಪಂ/ ಪ್ರ-1	18	40
2ಎ, 2ಬಿ, 3ಎ, 3ಬಿ	18	38
ಸಾಮಾನ್ಯ ವರ್ಗ	18	35

ಅರ್ಜಿ ಸಲ್ಲಿಸುವ ವಿಧಾನ ಹಾಗೂ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ.

ಅಂತರ್ಜಾಲದ ಮೂಲಕ (online) ಅರ್ಜಿಗಳನ್ನು ದಿನಾಂಕಃ 16/01/2013 ರಿಂದ ದಿನಾಂಕಃ 15/02/2013 ರವರೆಗೆ ಆನ್ ಲೈನ್ ಮೂಲಕ ಸಲ್ಲಿಸಬಹುದು

ಅರ್ಜಿ ಶುಲ್ಕಃ

ಪರಿಶಿಷ್ಟ ಜಾತಿ,/ ಪರಿಶಿಷ್ಠ ಪಂಗಡ, /ಪ್ರವರ್ಗ-1 .ಅಂಗವಿಕಲ ಹಾಗೂ ಮಹಿಳಾ ಅಭ್ಯರ್ಥಿಗಳು	ರೂ/- 100-00
ಸಾಮಾನ್ಯ ವರ್ಗ /2ಎ /2ಬಿ /3ಎ /3ಬಿ/ ವರ್ಗದ ಅಭ್ಯರ್ಥಿಗಳಿಗೆ	ರೂ/- 200-00

ಅರ್ಜಿ ಸಲ್ಲಿಸುವ ವಿಧಾನಃ

ಅರ್ಜಿಗಳನ್ನು ಆನ್ ಲೈನ್ (online) (ಎಲೆಕ್ಟ್ರಾನಿಕ್ ಮಾರ್ಗ) ಮುಖಾಂತರ ಅರ್ಜಿಯನ್ನು ಸಲ್ಲಿಸಬೇಕು. ಅರ್ಜಿಗಳನ್ನು ಖುದ್ದಾಗಿ ಅಥವಾ ಅಂಚೆ ಮೂಲಕ ಪ್ರತ್ಯೇಕವಾಗಿ ಸಲ್ಲಿಸಲು ಅವಕಾಶವಿರುವುದಿಲ್ಲ. ಅಭ್ಯರ್ಥಿಯು ಇಲಾಖೆಯ ಅಧಿಕೃತ ವೆಬ್ ಸೈಟ್ http://shimoga-va.kar.nic.in ತೆರೆದು ಕಂಪ್ಯೂಟರ್ ಪರದೆಯ ಮೇಲೆ ಅರ್ಜಿಯ ನಮೂನೆಯಲ್ಲಿ ಅಭ್ಯರ್ಥಿಯು ಹೊಂದಿರುವ ಮಾಹಿತಿಯನ್ನು ತುಂಬಬೇಕು, PREVIEW ನೀಡಿದ ನಂತರದಲ್ಲಿ ಅಭ್ಯರ್ಥಿಯು submit button ನ್ನು ಒತ್ತಿದರೆ ಅರ್ಜಿ ಸಂಖ್ಯೆ (Reference No.) ಸೃಷ್ಟಿಯಾಗುತ್ತದೆ. ನಂತರದಲ್ಲಿ ಅಭ್ಯರ್ಥಿಯು ಸ್ವೀಕೃತಿ ಪತ್ರ (Acknowledgement slip) ಮತ್ತು ದ್ವಿಪ್ರತಿ ಚಲನ್ ಅನ್ನು ತೆಗೆದುಕೊಳ್ಳತಕ್ಕದ್ದು. ಈ ಚಲನ್ ಅನ್ನು ಅರ್ಜಿಯ ಶುಲ್ಕ ದೊಂದಿಗೆ ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನ ಯಾವುದಾದರೂ ಶಾಖೆಯಲ್ಲಿ ಪಾವತಿಸಬಹುದು. ಅಭ್ಯರ್ಥಿಗಳು ಸ್ವೀಕೃತಿ ಸ್ಲಿಪ್ ನ್ನು ಮತ್ತು ಚಲನಿನ ಒಂದು ಪ್ರತಿಯನ್ನು ಕಡ್ಡಾಯವಾಗಿ ಇರಿಸಿಕೊಳ್ಳತಕ್ಕದ್ದು. ಇನ್ನೊಂದು ಚಲನ್ ಪ್ರತಿ ಬ್ಯಾಂಕ್ ಬಳಿ ಇರುತ್ತದೆ. ಅಭ್ಯರ್ಥಿಗಳ ಬಳಿ ಇರುವ ಚಲನ್ ನ್ನು ಸ್ಕ್ಯಾನ್ ಮಾಡಿ ಮೇಲೆ ತಿಳಿಸಿರುವ ವೆಬ್ ಸೈಟ್ ವಿಳಾಸಕ್ಕೆ ಅಪ್ ಲೋಡ್ ಮಾಡತಕ್ಕದ್ದು. ಈ ದಾಖಲೆಗಳನ್ನು ನಿಗಧಿ ಪಡಿಸಿದ ದಿನಾಂಕದಂದು ಹಾಜರು ಪಡಿಸತಕ್ಕದ್ದು. ಬ್ಯಾಂಕ್ ನಲ್ಲಿ ನಿಗದಿತ ಅರ್ಜಿ ಶುಲ್ಕ ಪಾವತಿಸಲು ಕೊನೆಯ ದಿನಾಂಕ 16/02/2013 ಆಗಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ದಿನಾಂಕಃ 16/01/2013 ರ ಅಧಿಸೂಚನೆಯನ್ನು ಜಿಲ್ಲಾಧಿಕಾರಿಗಳ ಕಛೇರಿ, ಉಪವಿಭಾಗಾಧಿಕಾರಿಗಳ ಕಛೇರಿ ಮತ್ತು ಜಿಲ್ಲೆಯ ಎಲ್ಲಾ ತಹಶೀಲ್ದಾರರ ಕಛೇರಿಯ ನೋಟೀಸ್ ಬೋರ್ಡಿನಲ್ಲಿ ಹಾಗೂ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಲಾಗಿದ್ದು ನೋಡಬಹುದಾಗಿದೆ. ಹೆಚ್ಚಿನ ಮಾಹಿತಿಗೆ ಈ ಕಛೇರಿಯ ಅಧಿಕೃತ ಈ ಮೇಲ್ E_mail: **vashivamogga@gmail.com** ನಲ್ಲಿ ಪರಿಶೀಲಿಸಬಹುದಾಗಿದೆ.

ಸಂಪರ್ಕಿಸ ಬಹುದಾದ ದೂರವಾಣಿ ಸಂಖ್ಯೆ 08182-225410.

ಟಿಪ್ಪಣಿಃ ಆಯ್ಕೆ ಪ್ರಕ್ರಿಯೆಯು ಅವರು ಅರ್ಹತಾ ಪರೀಕ್ಷೆಯಲ್ಲಿ ಪಡೆದ ಅಂಕಗಳ (On Merit) ಆಧಾರದ ಮೇಲೆ ಆಯಾ ವರ್ಗಕ್ಕೆ ಸಂಬಂಧಿಸಿದಂತೆ ಮಾತ್ರ ನಡೆಯುತ್ತದೆ.

ಜಿಲ್ಲಾಧಿಕಾರಿಗಳು ಮತ್ತು ಅಧ್ಯಕ್ಷರು,
ಗ್ರಾಮಲೆಕ್ಕಿಗರ ನೇರನೇಮಕಾತಿ ಆಯ್ಕೆ ಪ್ರಾಧಿಕಾರ,
ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ.

PR.08